ಹಿಡಿತ ಬಿಗಿಗೊಳಿಸಿದ ಕೈ, ಮುದುಡಿದ ಕಮಲ

ಬಾಗಲಕೋಟೆ ಉಪಚುನಾವಣೆ | ನಿರೀಕ್ಷೆ ಮೀರಿದ ಅಂತರದಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಮೇಟಿ

• **ಈಶ್ವರ್‌ಶೆಟ್ಟರ**
ಕನ್ನಡಪ್ರಭ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುವ ಮೂಲಕ ತನ್ನ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದ್ದು, ಪ್ರಬಲ ಪೈಪೋಟಿ ನೀಡಿದ್ದ ಬಿಜೆಪಿಗೆ ಇನ್ನಿಲ್ಲದ ಮರ್ಮಾಘಾತ ನೀಡಿದೆ. ಆ ಮೂಲಕ ತನ್ನದೆ ವಶದಲ್ಲಿದ್ದ ಸ್ಥಾನವನ್ನು ಮತ್ತೊಮ್ಮೆ ಭದ್ರಪಡಿಸಿಕೊಂಡಿದೆ ಕಾಂಗ್ರೆಸ್. ಹೀಗಾಗಿ ಎಚ್.ವೈ.ಮೇಟಿ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ಅವರ ಪುತ್ರ ಉಮೇಶ ಉಸ್ತುವಾರಿಯಾಗಿ ಮುಂದುವರಿದಿದ್ದಾರೆ.

ರಾಜ್ಯಾದ್ಯಂತ ಗಮನ ಸೆಳೆದಿದ್ದ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಿರೀಕ್ಷೆಗೂ ಮೀರಿ ಗೆದ್ದು ಬೀಗಿದ್ದು, ಈ ಪ್ರಮಾಣದ ಗೆಲುವನ್ನು ಕಾಂಗ್ರೆಸ್ ಪಕ್ಷ ಸಹ ಊಹಿಸಿರಲಿಲ್ಲ. ಅಂತಹ ಗೆಲುವನ್ನು ಬಾಗಲಕೋಟೆ ಮತದಾರರು ನೀಡುವ ಮೂಲಕ ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಇನ್ನಿಲ್ಲದ ಬಲ ನೀಡಿದ್ದಾರೆ.

ಎಚ್.ವೈ.ಮೇಟಿ ಅವರ ನಿಧನದ ನಂತರ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿನ ಉಮೇಶ ಮೇಟಿ ಹಾಗೂ ಬಿಜೆಪಿಯ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರ ನಡುವಿನ ಜಿದ್ದಾಜಿದ್ದಿನ ಪೈಪೋಟಿ ನಡೆದು ಅಂತಿಮವಾಗಿ ಕಾಂಗ್ರೆಸ್ಸಿಗೆ ಐತಿಹಾಸಿಕ ಗೆಲುವು ಲಭಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರತಿಷ್ಠೆಯಾಗಿದ್ದ ಬಾಗಲಕೋಟೆ ಉಪಚುನಾವಣೆಯನ್ನು ಸಮರ್ಥವಾಗಿ ಎದುರಿಸಿ ಪಕ್ಷಕ್ಕೆ ಹಾಗೂ ನಾಯಕತ್ವಕ್ಕೆ ಬೆಂಬಲವಾಗಿ ನಿಂತು ಕಾಂಗ್ರೆಸ್‌ನ್ನು ಗೆಲ್ಲಿಸಿಕೊಂಡು ಬರುವಲ್ಲಿ ಅವರ ಆಪ್ತ ಬಳಗ ಯಶಸ್ವಿಯಾಗಿದೆ.

ಕಾಂಗ್ರೆಸ್ ಗೆಲುವಿಗೆ ಕಾರಣವಾದ ಅಂಶಗಳು: ಉಪಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಕಾಂಗ್ರೆಸ್ ಪಕ್ಷ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಪರ ಯೋಜನೆಗಳನ್ನು ಘೋಷಿಸುವ ಮೂಲಕ ಮತದಾರರ ಓಲೈಕೆಗೆ ಮುಂದಡಿ ಇಡುವ ಮೂಲಕ ಭರವಸೆ ಮೂಡಿಸುವಲ್ಲಿ ಯಶಸ್ವಿಯಾಯಿತು. ಬಾಗಲಕೋಟೆಗೆ ಸರ್ಕಾರಿ ವೈದ್ಯಕೀಯ ಕಾಲೇಜು, ಸುಸಜ್ಜಿತ ಮಾರುಕಟ್ಟೆ ನಿರ್ಮಾಣ, ಸಂತ್ರಸ್ತರಿಗೆ ಸೂಕ್ತ ನ್ಯಾಯ ಒದಗಿಸುವ ಭರವಸೆಗಳು ಸಹ ಕಾಂಗ್ರೆಸ್ ಗೆಲುವಿಗೆ ಸಹಕಾರಿಯಾದವು. ಜತೆಗೆ ಮೇಟಿ ಕುಟುಂಬಕ್ಕೆ ಟಿಕೆಟ್ ಘೋಷಣೆ ಮಾಡಿದಾಗ ಕಾಂಗ್ರೆಸ್‌ನಲ್ಲಿಯೇ ಹೆಚ್ಚು ವಿರೋಧಗಳು ಕಾಣದಿರುವುದು ಕೂಡ ಆರಂಭದಲ್ಲಿಯೇ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಾಯಿತು.

ಸರ್ಕಾರದ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿಗೆ ಬಹುದೊಡ್ಡ ಆಸರೆಗಳಾದವು. ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳಾ ಮತದಾರರು ಗ್ಯಾರಂಟಿ ಯೋಜನೆಗಳ ಕುರಿತು ಹೊಂದಿದ್ದ ಉತ್ತಮ ಅಭಿಪ್ರಾಯಗಳು ಕೂಡ ಪಕ್ಷದ ಗೆಲುವಿನ ಅಂತರ ಹೆಚ್ಚಿಸಿದವು.

ಮುಖ್ಯಮಂತ್ರಿಗಳ ಅವಿರತ ಶ್ರಮ: ದಿ.ಎಚ್.ವೈ. ಮೇಟಿ ಅವರ ಅಕಾಲಿಕ ಸಾವಿನ ನಂತರ ಎದುರಾದ ಉಪಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಅನಿವಾರ್ಯತೆಯಲ್ಲಿದ್ದ ಸಿದ್ದರಾಮಯ್ಯ ಅವರು ಬಾಗಲಕೋಟೆ ಕ್ಷೇತ್ರದಲ್ಲಿ ಪ್ರಚಾರಕ್ಕಾಗಿ ಮಾಡಿದ ಪ್ರಯತ್ನ ಫಲ ನೀಡಿತು. ನಾಮಪತ್ರದಿಂದ ಹಿಡಿದು ಅಂತಿಮ ಸುತ್ತಿನ ಪ್ರಚಾರದವರೆಗೂ ಬಾಗಲಕೋಟೆಯಲ್ಲಿ ಬೀಡು ಬಿಟ್ಟು ಅಹಿಂದ ವರ್ಗಗಳ ಮತ ಕ್ರೋಢೀಕರಣ ಜೊತೆಗೆ ಸುಶಿಕ್ಷಿತ ವರ್ಗವನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳುವ ರೀತಿಯಲ್ಲಿ ನಡೆದ ಸಂವಾದಗಳು ಸಹ ಮತದಾರರಲ್ಲಿ ವಿಶ್ವಾಸ ಮೂಡಿಸಲು ಯಶಸ್ವಿಯಾದವು. ಒಳಮೀಸಲಾತಿ ಅನುಷ್ಠಾನದಲ್ಲಿನ ಗೊಂದಲ ಸಹಜವಾಗಿ ಕಾಂಗ್ರೆಸ್ ಪಕ್ಷಕ್ಕೆ ಅಲ್ಪ ಹಿನ್ನಡೆ ತರುತ್ತದೆ ಎಂಬ ಮಾತುಗಳ ನಡುವೆಯೂ ಆ ಸಮುದಾಯಗಳು ಹೆಚ್ಚಿರುವ ತಾಂಡಾಗಳಿಗೆ, ಕೇರಿಗಳಿಗೆ ತೆರಳಿ ಅವರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾದರು.

ಬಿಜೆಪಿ ಸೋಲಿಗೆ ಕಾರಣವಾದ ಅಂಶಗಳು: ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಅಬ್ಬರದ ಪ್ರಚಾರ ಹಾಗೂ ಮುಖ್ಯಮಂತ್ರಿ ಆದಿಯಾಗಿ ಸಚಿವರ ದಂಡೇ ಕ್ಷೇತ್ರದಲ್ಲಿ ಬೀಡು ಬಿಟ್ಟು ನಡೆಸಿದ ಸಂಘಟಿತ ಪ್ರಯತ್ನ ಎದುರಿಸುವಲ್ಲಿ ಬಿಜೆಪಿಗೆ ಹಿನ್ನಡೆಯಾಯಿತು. ಸರ್ಕಾರದ ಭರವಸೆಗಳು, ಹೇರಳವಾದ ಸಂಪನ್ಮೂಲ ಬಳಕೆ, ಕಾಂಗ್ರೆಸ್ಸಿನ ಪಾರಂಪರಿಕ ಮತದಾರರು ಬೇರೆಡೆಗೆ ಹೋಗದ ರೀತಿಯಲ್ಲಿ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿ, ಜೊತೆಗೆ ಸಣ್ಣಪುಟ್ಟ ಸಮುದಾಯಗಳಿಗೆ ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸುವ ಭರವಸೆ ನೀಡಿದ್ದರಿಂದ ಬಿಜೆಪಿ ಪರ ಇದ್ದ ಕೆಲವು ಸಮುದಾಯಗಳ ಮತ ವಿಭಜನೆ ಬಿಜೆಪಿ ಬಹುದೊಡ್ಡ ಅಂತರದಲ್ಲಿ ಸೋಲಲು ಕಾರಣವಾಯಿತು. ನಗರ ಪ್ರದೇಶದಲ್ಲಿ ಗಟ್ಟಿ ನೆಲೆ ಹೊಂದಿದ್ದ ಬಿಜೆಪಿಗೆ ಉಪಚುನಾವಣೆಯಲ್ಲಿ ನಿರೀಕ್ಷಿತ ಮತಗಳು ಬಾರದೆ ಹೋಗಿದ್ದು ಒಂದೆಡೆಯಾದರೆ ಗ್ರಾಮೀಣ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಕಳೆದ ಬಾರಿಗಿಂತಲೂ ಹೆಚ್ಚಿನ ಮತ ತರುವಲ್ಲಿ ಯಶ ಕಂಡಿದ್ದು ಸಹ ಬಿಜೆಪಿ ಹಿನ್ನಡೆಗೆ ಕಾರಣವಾಯಿತು.

ಕೈ ಗೆಲುವಿಗೆ ಶ್ರಮವಹಿಸಿದವರು: ಬಾಗಲಕೋಟೆ ಉಪಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿ ಬಹುದೊಡ್ಡ ಅಂತರದಲ್ಲಿ ಗೆಲುವು ತಂದುಕೊಡಲು ಹಲವರ ನಿರಂತರ ಪ್ರಯತ್ನಕ್ಕೆ ಮತದಾರ ಪ್ರಭು ಕೈ ಹಿಡಿದು ಬೆಂಬಲಿಸಿದ್ದಾನೆ. ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ. ತಿಮ್ಮಾಪೂರ ಒಂದು ತಿಂಗಳ ಕಾಲ ಕ್ಷೇತ್ರದಲ್ಲಿ ಬೀಡು ಬಿಟ್ಟು ಎಲ್ಲ ಸಮುದಾಯಗಳ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದರೆ, ಉಸ್ತುವಾರಿ ವಹಿಸಿದ್ದ ಸಚಿವ ಸತೀಶ ಜಾರಕಿಹೊಳಿ ಅವರ ಚುನಾವಣೆಯ ಕಾರ್ಯತಂತ್ರ, ಗ್ರಾಮೀಣ ಭಾಗದಲ್ಲಿ ನಡೆಸಿದ ಸಭೆಗಳು ಕಾಂಗ್ರೆಸ್ ಗೆಲುವಿಗೆ ಸಹಕಾರ ನೀಡಿದವು.

ಮತಕ್ಷೇತ್ರದಲ್ಲಿ ಅಹಿಂದ ಮತಗಳ ವಿಭಜನೆಯಾಗದ ರೀತಿಯಲ್ಲಿ ಸಂಘಟಿತ ಪ್ರಯತ್ನವನ್ನು ಕಾಂಗ್ರೆಸ್ ಪಕ್ಷದ ಎಲ್ಲ ಮುಂಚೂಣಿ ನಾಯಕರು ಶ್ರಮವಹಿಸಿ ಪಕ್ಷದ ಗೆಲುವಿಗೆ ನಿಂತಿದ್ದರಿಂದ ಸಹಜವಾಗಿ ಹೆಚ್ಚಿನ ಅಂತರದ ಗೆಲುವಿಗೆ ಪೂರಕವಾಯಿತು. ಒಟ್ಟಾರೆ ಬಾಗಲಕೋಟೆ ಉಪಚುನಾವಣೆ ಫಲಿತಾಂಶ ಕಾಂಗ್ರೆಸ್ ಪಕ್ಷದ ಹುಮ್ಮಸ್ಸಿಗೆ ಮುನ್ನುಡಿ ಬರೆದಿದ್ದರೆ, ಬಿಜೆಪಿ ಸೋಲಿನಿಂದ ಪಾಠ ಕಲಿತು ತಿದ್ದಿಕೊಂಡು ಮತ್ತೆ ತನ್ನ ಗತವೈಭ ಪಡೆದುಕೊಳ್ಳಲು ಮುಂದಾಗಬೇಕಿದೆ.





ನಾನು ಮೊದಲೇ ಹೇಳಿದ್ದೆ, ಬಾಗಲಕೋಟೆಯಲ್ಲಿ ಕಮಲ ಹಾಗೂ ಜೆಸಿಬಿ ಎರಡೂ ಮನೆಗೆ ಹೋಗುತ್ತವೆ ಎಂದು. ಯತ್ನಾಳ ಹಾಗೂ ವಿಜಯೇಂದ್ರ ಮನೆಗೆ ಹೋಗುತ್ತಾರೆ ಎಂದಿದ್ದೆ. ಇಂದಿನ ಫಲಿತಾಂಶ ಹಾಗೆಯೇ ಆಗಿದೆ. ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಜನರು ಕಾಂಗ್ರೆಸ್ ಕೈ ಹಿಡಿದಿದ್ದಾರೆ.

• **ಎಂ.ಬಿ. ಪಾಟೀಲ** ಕೈಗಾರಿಕೆ ಸಚಿವ



ಈ ಗೆಲುವು ಸರ್ಕಾರದ ಸಾಧನೆಗೆ ಮತದಾರರು ನೀಡಿರುವ ಮನ್ನಣೆ. ವಿಜಯಪುರದ ಶಾಸಕರೊಬ್ಬರು ನನ್ನ ಹಾಗೂ ನನ್ನ ಪುತ್ರಿಯ ವಿರುದ್ಧ ಹ'ಗ'ಂ ರ' ಪದ ಬಳಸಿ, ಅಪಪ್ರಚಾರ ಮಾಡುವ ಮೂಲಕ ಬಿಜೆಪಿ ಸೋಲಿಸುವ ಗುರಿ ಈಡೇರಿಸಿಕೊಂಡಿದ್ದು, ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಲು ನೆರವಾಗಿದ್ದಾರೆ. ಬಿಜೆಪಿ ಸೋಲಿಸುವ ಆಂತರಿಕ ಉದ್ದೇಶದಿಂದ ವಿಜಯಪುರದ ಶಾಸಕ ಹಾವೇರಿ ಜಿಲ್ಲೆಯ ಉಪ ಚುನಾವಣೆಯಲ್ಲೂ ಪ್ರಚಾರ ಮಾಡಿದ್ದಕ್ಕೆ ಬಿಜೆಪಿ ಸೋತಿದೆ. ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ಈ ಶಾಸಕ ಪ್ರಚಾರ ಮಾಡಿದ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಸೋತಿದ್ದು, ಕಾಂಗ್ರೆಸ್ ವಿಜಯ ಸಾಧಿಸಿದೆ.

• **ಶಿವಾನಂದ ಪಾಟೀಲ** ಸಚಿವ

ಪ್ರತಿ ಸುತ್ತಿನಲ್ಲಿ ಮುನ್ನಡೆ ಕಾಯ್ದುಕೊಂಡ ಮೇಟಿ

ಬಾಗಲಕೋಟೆ ಉಪಚುನಾವಣೆ ಮತ ಎಣಿಕೆಯಲ್ಲಿ ಈ ಬಾರಿಯ ವಿಶೇಷತೆ ಎಂದರೆ ಕಾಂಗ್ರೆಸ್ ಪಕ್ಷ 23 ಸುತ್ತಿನ ಮತ ಎಣಿಕೆಯ ಸಂದರ್ಭದಲ್ಲಿ ಕೇವಲ ಮೂರು ಬಾರಿ ಮಾತ್ರ ಅಲ್ಪ ಹಿನ್ನಡೆ ಕಂಡಿದ್ದು, ಬಿಟ್ಟರೆ ಉಳಿದ 20 ಸುತ್ತುಗಳಲ್ಲೂ ಮುನ್ನಡೆ ಕಾಯ್ದುಕೊಳ್ಳುವ ಮೂಲಕ ದಾಖಲೆಯ ಗೆಲುವು ದಾಖಲಿಸಿದೆ. ಮೊದಲ ಸುತ್ತಿನಲ್ಲಿಯೇ ಶುಭ ಕಂಡ ಕಾಂಗ್ರೆಸ್ ಪಕ್ಷದ ನಾಗಾಲೋಟ ತಡೆಯುವಲ್ಲಿ ಬಿಜೆಪಿಗೆ ಕೊನೆಯವರೆಗೂ ಸಾಧ್ಯವಾಗಲೇ ಇಲ್ಲ. ಸುತ್ತುಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಪಡೆದ ಮತಗಳ ವಿವರ ಇಂತಿದೆ.



ಪ್ರಮಾಣ ಪತ್ರ ವಿತರಣೆಯಲ್ಲಿ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಉಪ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಸೇರಿದಂತೆ ಜಿಲ್ಲೆಯ ವಿವಿಧ ಶಾಸಕರು ಉಪಸ್ಥಿತರಿದ್ದರು.

ಸುತ್ತು	ಕಾಂಗ್ರೆಸ್	ಬಿಜೆಪಿ	ಮುನ್ನಡೆ ಮತ
1	6106	2899	3207
2	10996	5,980	5,116
3	16935	8312	8623
4	21835	10968	10867
5	27314	13923	13391
6	32363	16906	15457
7	34483	21773	12710
8	37202	26321	10881
9	41206	29397	11809
10	44620	33236	11384
11	47206	37237	9969
12	50432	39898	10534
13	53849	43528	10321
14	57471	47519	9952
15	60977	51422	9555
16	64747	54625	10122
17	68271	57505	10766
18	73715	60697	13025
19	78482	63607	14875
20	83455	66984	16471
21	87624	70419	17205
22	92856	72912	19944

ಕಾಂಗ್ರೆಸ್ ಪಡೆದ ಒಟ್ಟು ಮತಗಳು (ಅಂಚೆ ಮತಗಳು ಸೇರಿ)

98919

ಬಿಜೆಪಿ ಪಡೆದ ಒಟ್ಟು ಮತಗಳು

76587

22,332
ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು

ಸುದ್ದಿ ಸಿಂಚನ



ಬಾಗಲಕೋಟೆ ಮತಕ್ಷೇತ್ರದ ನೂತನವಾಗಿ ಶಾಸಕರಾಗಿ ಜಯಭೇರಿ ಬಾರಿಸಿದ ಉಮೇಶ ಹುಲ್ಲಪ್ಪ ಮೇಟಿ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರು ಸಿಹಿ ತಿನಿಸಿ ಸನ್ಮಾನಿಸಿದರು.

ಕಮತಗಿಯಲ್ಲಿ ಕಾಂಗ್ರೆಸ್ ವಿಜಯೋತ್ಸವ



ಕಮತಗಿ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಎಚ್. ಮೇಟಿ ಅವರು ಗೆಲುವು ಸಾಧಿಸಿದ್ದರಿಂದ ಕಮತಗಿ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಗುಲಾಲ ಎರಚಿ ಹಾಗೂ ಸಿಹಿ ಹಂಚಿ ಮತ್ತು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಶಂಕ್ರಪ್ಪ ಮಂಕಣಿ, ಮಹಾಂತೇಶ ಅಂಗಡಿ, ಪಪಂ ಅಧ್ಯಕ್ಷ ಬಸವರಾಜ ಕುಂಬಳಾವತಿ, ಉಪಾಧ್ಯಕ್ಷೆ ನೇತ್ರಾವತಿ ನಿಂಬಲಗುಂದಿ, ಪಿಕೆಪಿಎಸ್ ಅಧ್ಯಕ್ಷ ಸಿದ್ದು ಹೊಸಮನಿ, ಪಪಂ ಸದಸ್ಯ ದೇವಿಪ್ರಸಾದ ನಿಂಬಲಗುಂದಿ, ಚಂದು ಕುರಿ, ಲಕ್ಷ್ಮಣ ಮಾದರ, ನಂದಾ ದ್ಯಾಮಣ್ಣವರ, ಹುಚ್ಚವ್ವ ಹಗೇದಾಳ, ಯಲ್ಲಪ್ಪ ವಡ್ಡರ, ಎನ್.ಎಲ್. ತಹಶೀಲ್ದಾರ, ವಿ.ಆರ್. ಮಳ್ಳಿ, ಮೈಬು ದಾಲಾಯತ, ತಿಮ್ಮಣ್ಣ ಹಗೇದಾಳ, ಸಂಗಪ್ಪ ಮನ್ನಿಕೇರಿ, ನಜೀರ್ ಮಕಾನದಾರ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಲೋಕಾಪುರದಲ್ಲಿ ಪಟಾಕಿ ಸಿಡಿಸಿ ಸಂಭ್ರಮ



ಲೋಕಾಪುರ: ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಪಡೆಯುತ್ತಿದ್ದಂತೆಯೇ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಯುವ ಮುಖಂಡರು ಪಟಾಕಿ ಸಿಡಿಸಿ ಸಚಿವ ಸತೀಶ ಜಾರಕಿಹೊಳಿ ಮತ್ತು ಕೆಪಿಸಿಸಿ ಯೂತ್ ಪ್ರಧಾನ ಕಾರ್ಯದರ್ಶಿ ವಿನಯ ತಿಮ್ಮಾಪುರ ಅವರ ಭಾವಚಿತ್ರ ಹಿಡಿದು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಆರ್.ಬಿ. ತಿಮ್ಮಾಪುರ, ಸತೀಶ ಜಾರಕಿಹೊಳಿ ಕಾಂಗ್ರೆಸ್ ಮುಖಂಡರಿಗೆ ಜೈಕಾರ ಹಾಕಿದರು. ಈ ವೇಳೆ ಕಾಂಗ್ರೆಸ್ ಯುವ ಮುಖಂಡರಾದ ಗಣಪತಿ ಗಸ್ತಿ, ರಿಯಾಜ್ ಭಾಗವಾನ, ಸುಲ್ತಾನ ಕಲಾದಗಿ, ಸುರೇಶ ಪೂಜಾರ, ಮಹಾದೇವ ದೊಡಮನಿ, ಲಾಲಸಾಬ ಗುದಗಿ ಮತ್ತಿತರು ಇದ್ದರು.

ಜಲಾಶಯ ಮಟ್ಟ

ಆಲಮಟ್ಟಿ
- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ................509.66ಮೀ.
- ಒಳಹರಿವು......................ಇಲ್ಲ
- ಹೊರಹರಿವು...................3,727 ಕ್ಯು

ಘಟಪ್ರಭಾ
- ಗರಿಷ್ಠ ಮಟ್ಟ.................2175.00ಮೀ.
- ಇಂದಿನ ಮಟ್ಟ............2110.916ಮೀ.
- ಒಳಹರಿವು......................ಇಲ್ಲ
- ಹೊರಹರಿವು...................147 ಕ್ಯು

ಮೊದಲ ಬಾರಿಗೆ ವಿಧಾನಸಭೆಗೆ ಪ್ರವೇಶಿಸಿದ ಉಮೇಶ



ಬಾಗಲಕೋಟೆ: ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಬಿಜೆಪಿಯ ವೀರಣ್ಣ ಚರಂತಿಮಠ ಅವರನ್ನು ಭಾರಿ ಅಂತರದಿಂದ ಸೋಲಿಸುವ ಮೂಲಕ ಕಾಂಗ್ರೆಸ್‌ನ ಉಮೇಶ ಮೇಟಿ ಮೊದಲ ಬಾರಿಗೆ ವಿಧಾನಸಭೆಯ ಮೆಟ್ಟಿಲು ತುಳಿದಿದ್ದಾರೆ. ನವನಗರದ ತೋಟಗಾರಿಕೆ ವಿವಿಯಲ್ಲಿ ನಡೆದ ಮತ ಎಣಿಕೆಯಲ್ಲಿ ಅಭೂತಪೂರ್ವ ಗೆಲುವು ಕಂಡ ಉಮೇಶ ಮೇಟಿ ಅವರು ಹಿರಿಯ ರಾಜಕಾರಣಿ ದಿ.ಎಚ್.ವೈ.ಮೇಟಿ ಅವರ ಪುತ್ರರಾಗಿದ್ದು, ಅನುಕಂಪದ ಅಲೆ, ಜೊತೆಗೆ ಆಡಳಿತಾರೂಢ ಸರ್ಕಾರ ಜೊತೆಯಾಗಿದ್ದರಿಂದ ಈ ಗೆಲುವು ಸಾಧ್ಯವಾಗಿದೆ.

ಸಂಭ್ರಮ- ವಿಜಯೋತ್ಸವ: ಆರಂಭಿಕ ಮುನ್ನಡೆಯೊಂದಿಗೆ ಗೆಲುವು ಕಂಡ ಉಮೇಶ ಮೇಟಿ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು, ಹಿರಿಯರು ಕುಟುಂಬದ ಸದಸ್ಯರು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ನಗರ, ನವನಗರ, ವಿದ್ಯಾಗಿರಿಯಲ್ಲಿ ಕೆಲವು ಯುವಕರು ಬೈಕ್ ರ್ಯಾಲಿ ಮಾಡಿ, ಗುಲಾಲ್ ಎರಚಿ, ಪಟಾಕಿ ಸಿಡಿಸಿ ಗೆಲುವು ಹಂಚಿಕೊಂಡರು.



ನಮ್ಮ ಸರ್ಕಾರದ ಸಾಧನೆ, ಕಾರ್ಯಕರ್ತರ, ಮುಖಂಡರ ಒಗ್ಗಟ್ಟು ಇದಕ್ಕೆ ಪ್ರಮುಖ ಕಾರಣ. ರೈತ ಪರ ಕೆಲಸ ಮಾಡಿದ್ದೇವೆ, ಮುಳುಗಡೆ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಿದ್ದೇವೆ. ಮೆಡಿಕಲ್ ಕಾಲೇಜು ಸ್ಥಾಪನೆ ಮಾಡುತ್ತಿದ್ದೇವೆ. ಅಹಿಂದ ಮತಗಳು ಕಾಂಗ್ರೆಸ್ ಪರವಾಗಿವೆ. ಎಲ್ಲಾ ಜನರ ಪ್ರೀತಿ ಮಾಡಿರುವ ವ್ಯಕ್ತಿ ಎಚ್.ವೈ.ಮೇಟಿ ಅವರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನಪ್ರಿಯತೆ, ಗ್ಯಾರಂಟಿ ಯೋಜನೆಗಳು, ಸಿಎಂ ಕಾರ್ಯ, ಎಚ್.ವೈ. ಮೇಟಿ ಅವರ ಸೌಜನ್ಯತೆ, ಎಲ್ಲ ಸಚಿವರು, ಶಾಸಕರು ನಾಯಕರ ಪರಿಶ್ರಮ ನಮ್ಮ ಗೆಲುವಿಗೆ ಕಾರಣವಾಗಿದೆ.

• **ಆರ್.ಬಿ. ತಿಮ್ಮಾಪುರ** ಜಿಲ್ಲಾ ಉಸ್ತುವಾರಿ ಸಚಿವ, ಬಾಗಲಕೋಟೆ



ಬಾಗಲಕೋಟೆ ಮತ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದ್ದು, ಮತದಾರರ ಐತಿಹಾಸಿಕ ತೀರ್ಪು ಇದಾಗಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿಗೆ ಮತದಾರ ಪ್ರಭು ಕೈ ಹಿಡಿದಿದ್ದಾರೆ. ಮುಖ್ಯವಾಗಿ ಚುನಾವಣೆ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಹಾಗೂ ಆರ್.ಬಿ.ತಿಮ್ಮಾಪುರ ತಂಡ ತಂತ್ರಗಾರಿಕೆ ಹೊಸ ಪರ್ವ ಸೃಷ್ಟಿಸಿತು. ಪಕ್ಷದ ಮುಖಂಡರು, ಕಾರ್ಯಕರ್ತರು, ಸಚಿವರ ಶ್ರಮ ಮರೆಯಲಾಗದು. ಮಹಿಳಾ ಮತದಾರರು ತಮ್ಮ ಶಕ್ತಿ ವ್ಯಕ್ತಪಡಿಸಿರುವುದು ಸಂತೋಷದಾಯಕ ಸಂಗತಿ. ದಿ.ಎಚ್.ವೈ.ಮೇಟಿ ಅವರ ನೆನಪು ಸದಾ ಸ್ಮರಣೀಯ. ಉಪಚುನಾವಣೆ ಗೆಲುವು ಪಕ್ಷಕ್ಕೆ ಚೈತನ್ಯ ತುಂಬಿದೆ.

• **ರಕ್ಷಿತಾ ಭರತಕುಮಾರ ಈಟಿ** ಸದಸ್ಯರು ಕೆಪಿಸಿಸಿ ಮಹಿಳಾ ಘಟಕ

ಕೈ ಹಿಡಿದ ಗ್ಯಾರಂಟಿ ಯೋಜನೆಗಳು



ಜಮಖಂಡಿ: ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಬಡವರ ಬದುಕಿಗೆ ಆಸರೆಯಾಗಿವೆ. ಈ ಯೋಜನೆಗಳ ಜನಪ್ರಿಯತೆ ಹಾಗೂ ದಿ.ಎಚ್.ವೈ. ಮೇಟಿ ಅವರು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಗೆಲ್ಲಿಸಿವೆ ಎಂದು ಇಂಡಿಯನ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ತೌಫಿಕ್ ಪಾರ್ಥನಳ್ಳಿ ಹೇಳಿದರು. ನಗರದಲ್ಲಿಸುದ್ದಿಗಾರರೊಂದಿಗೆಮಾತನಾಡಿದಅವರು,ಕಾಂಗ್ರೆಸಸರ್ಕಾರದಗ್ಯಾರಂಟಿಯೋಜನೆಗಳಿಂದಾಗಿ ಪ್ರತಿಯೊಂದು ಕುಟುಂಬಕ್ಕೂ ಆರ್ಥಿಕ ಭದ್ರತೆ ಸಿಕ್ಕಿದೆ. ಇವು ಚುನಾವಣೆಯಲ್ಲಿ ಮತಗಳಾಗಿ ಪರಿವರ್ತನೆಯಾಗಿವೆ. ಮಾಜಿ ಸಚಿವ ದಿ. ಎಚ್.ವೈ. ಮೇಟಿ ಅವರು ಕ್ಷೇತ್ರದಾದ್ಯಂತ ಮಾಡಿರುವ ಜನಪರ ಕೆಲಸಗಳು ಮತ್ತು ಅವರ ಮೇಲಿರುವ ಜನಾನುರಾಗ, ತಳಮಟ್ಟದ ಜನಸಾಮಾನ್ಯರು ಮತ್ತು ಕಾರ್ಮಿಕ ವರ್ಗವು ಕಾಂಗ್ರೆಸ ಸರ್ಕಾರದ ಜನಪರ ನಿಲುವನ್ನು ಬೆಂಬಲಿಸುತ್ತಿದ್ದಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕೈ ಸಂಭ್ರಮ... ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರತಿಮಠರನ್ನು 22,332 ಮತಗಳ ಅಂತರದಿಂದ ಸೋಲಿಸಿದ ಉಮೇಶ ಮೇಟಿ

ಕೋಟೆ ಕ್ಷೇತ್ರಕ್ಕೆ ಮೇಟಿ ಕುಟುಂಬದ್ದೇ ಮತ್ತೆ ಸಾರಥ್ಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆ-2026ರ ಮತ ಎಣಿಕೆ ಕಾರ್ಯ ಸೋಮವಾರ ನಡೆದಿದ್ದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ, ಪ್ರತಿಸ್ಪರ್ಧಿ ಭಾರತೀಯ ಜನತಾ ಪಕ್ಷದ ಡಾ.ವೀರಣ್ಣ ಚರಂಟಿಮಠ ಅವರಿಗಿಂದ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿಗಳು ಆಗಿರುವ ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ ಗೆಲವನ್ನು ಅಧಿಕೃತವಾಗಿ ಘೋಷಣೆ ಮಾಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರು 98,919 ಮತ ಪಡೆದು ಗೆಲುವು ಸಾಧಿಸಿದರೆ, ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ 76,587 ಮತ ಪಡೆದು ಪರಾಜಯ ಹೊಂದಿದ್ದಾರೆ. ಉತ್ತಮ ಪ್ರಜಾಕೀಯ ಪಾರ್ಟಿಯ ಅಂತೋಷ ಸವ್ವಾಸೆ 512 ಮತ ಪಡೆದರೆ, ಬ್ಲೂ ಇಂಡಿಯಾ ಪಾರ್ಟಿಯ ತಳವಾರ ಶಿವಕುಮಾರ 112, ಜನತಾ ಚಳವಳಿ ಭಾರತ ಪಕ್ಷದ ತೋಜೋರಾಮಶೆಟ್ಟಿ ದೇವಾಂಗ 62, ಕರ್ನಾಟಕ ರಕ್ಷಾ ಸಮಿತಿಯ ನಾಗರಾಜ ಕಲಕುಟಗರ 154, ಆಲ್ ಇಂಡಿಯಾ ಜನರಕ್ಷಾ ಪಾರ್ಟಿಯ ಸಿದ್ದಪ್ಪ ಗೋಡಿ 131, ಪಕ್ಷೇತರ ಅಭ್ಯಥಿಗಳಾದ ಆನಂದ ಜಕಾತಿ 198, ರವಿ ಶಿವಪ್ಪ ಪಡಸಲಗಿ 389 ಮತ ಪಡೆದುಕೊಂಡಿದ್ದಾರೆ.



ಬಾಗಲಕೋಟೆ ಉಪ ಚುನಾವಣೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 2,60,182 ಮತಗಳ ಪೈಕಿ 1,77,073 ಮತಗಳು ಚಲಾವಣೆಗೊಂಡಿದ್ದು, 1458 ಮತಗಳು ನೋಟಾ ಮತಗಳು ಚಲಾವಣೆಯಾಗಿವೆ. 100 ಮತಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಗೆಲುವು ಸಾಧಿಸಿದ ಕಾಂಗ್ರೆಸ್ ಪಕ್ಷದ ಉಮೇಶ ಮೇಟಿ ಅವರಿಗೆ ಚುನಾವಣಾಧಿಕಾರಿ ಸಂತೋಷ ಜಗಲಾಸರ ಪ್ರಮಾಣ ಪತ್ರ ವಿತರಣೆ ಮಾಡಿದರು.

ಪ್ರಮಾಣ ಪತ್ರ ವಿತರಣೆ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಉಪ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಸೇರಿದಂತೆ ಜಿಲ್ಲೆಯ ವಿವಿಧ ಶಾಸಕರು ಉಪಸ್ಥಿತರಿದ್ದರು.

ಜನಪರ ಆಡಳಿತಕ್ಕೆ ಮತದಾರ ನೀಡಿದ ಮನ್ನಣೆ

ಜಮಖಂಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ವಿಜಯೋತ್ಸವ ವೇಳೆ ಮಾಜಿ ಶಾಸಕ ನ್ಯಾಮಗೌಡ

• **ಕನ್ನಡಪ್ರಭ ವಾರ್ತೆ** ಜಮಖಂಡಿ

ಕಾಂಗ್ರೆಸ್‌ನ ಜನಪರ ಆಡಳಿತಕ್ಕೆ ಜನರು ಮನ್ನಣೆ ನೀಡಿದ್ದು, ಬಾಗಲಕೊಟೆ ಹಾಗೂ ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದರು.ಸೋಮವಾರ ಸಂಜೆ ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿ ಕೊಂಡಿದ್ದ ವಿಜಯೋತ್ಸವದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ಇಬ್ಬರೂ ನೂತನ ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ. ದಿ. ಎಚ್.ವೈ, ಮೇಟಿ ಅವರ ಎಲ್ಲ ಕನಸುಗಳನ್ನು ಉಮೇಶ ಮೇಟಿ ಪೂರ್ಣ ಮಾಡಲಿದ್ದಾರೆ. ದಾವಣಗೆರೆಯ ದಿ.ಶಾಮನೂರು ಶಿವಶಂಕರಪ್ಪ ಅವರಂತೆ ಅವರ ಪುತ್ರ ಸಮರ್ಥರಾಗಿದ್ದು, ಉತ್ತಮ ಸೇವೆ ಸಲ್ಲಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ಕಾಂಗ್ರೆಸ್‌ನ ಎಲ್ಲ ಸಚಿವರು, ಶಾಸಕರು, ಕಾರ್ಯಕರ್ತರು, ಮುಖಂಡರು ಪಕ್ಷದ ಗೆಲುವಿಗಾಗಿ ಶ್ರಮಿಸಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಮಹೇಶ ಕೋಳಿ, ಪರಮಾನಂದ ಗೌರೋಜಿ, ಅನ್ವರ್ ಮೋಮಿನ್, ರವಿ ಯಡಳ್ಳಿ, ಈಶ್ವರ ವಾಳೆಣ್ಣವರ, ದಿಲಾವರ ಶಿರೋಳ, ಸುನೀಲ ಸಿಂಧೆ, ಯುವ ಕಾಂಗ್ರೆಸ್ ಕುಮಾರ ಆಲಗೂರ, ಬಿ.ಬಿ. ಪಾಟೀಲ, ಗುರುಲಿಂಗಪ್ಪ, ಶಶಿಧರ ನ್ಯಾಮಗೌಡ, ಬಸು ಹರಕಂಗಿ, ಸಾಧಿಕ ಬಂಟನೂರ, ಕಿರಣ ಪಿಸಾಳ, ಲಿಂಗರಾಜ ಪಾಟೀಲ, ನಾನಾ ಮೋರೆ, ಖಾಜಾ ಅವಟಿ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಇದ್ದರು. ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.



> ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪಠ್ಯಪುಸ್ತಕದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದರೆ ಸಾಲದು. ಅದರ ಜೊತೆಗೆ ಸಾಮಾನ್ಯ ಜ್ಞಾನವು ಕೂಡ ಇಂದು ಅತ್ಯವಶ್ಯಕವಾಗಿದೆ
> • **ಕೆ.ಎಸ್.ಗಾಣಗೇರ** ಪ್ರಾಚಾರ್ಯ

ಸುದ್ದಿ ಸಿಂಚನ

ಇಂದು ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ

ರಬಕವಿ-ಬನಹಟ್ಟಿ: ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಮೇ 5 ರಂದು ಸಂಜೆ 6ಕ್ಕೆ ರಬಕವಿಯ ಘಟ್ಟಗಿ ಬಸವೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ನಿವೃತ್ತ ಪ್ರಾಚಾರ್ಯ ಮೃತ್ಯುಂಜಯ ರಾಮದುರ್ಗ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ದಾರಿ ಕುರಿತು ನಿವೃತ್ತ ಉಪನ್ಯಾಸಕ ಶಿವಾನಂದ ದಾಶಾಳ ಉಪನ್ಯಾಸ ನೀಡಲಿದ್ದಾರೆ. ತಾಲೂಕು ಕಸಾಪ ಘಟಕದ ಅಧ್ಯಕ್ಷ ಮ. ಕೃ. ಮೇಗಾಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ, ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸುಶಾಂತ ಬರ್‌ಲಿಯವರನ್ನು ಸನ್ಮಾನಿಸಲಾಗುವುದು. ಸಾಮಾಜಿಕ ಕಾರ್ಯಕರ್ತ ಪರಪ್ಪ ಪೂಜಾರಿ, ಬಸವರಾಜ ಮಟ್ಟಿಕಲ್ಲಿ, ತೇರದಾಳ ತಾಲೂಕು ಘಟಕದ ಅಧ್ಯಕ್ಷ ಗಂಗಾಧರ ಮೋಪಗಾರ, ಮಹಾಲಿಂಗಪುರ ವಲಯದ ಅಧ್ಯಕ್ಷ ಬಸವರಾಜ ಮೇಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

8ರಂದು ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ

ತೇರದಾಳ(ರ-ಬ): ಪಟ್ಟಣದ ಸಿದ್ದೇಶ್ವರ ಗಲ್ಲಿಯ ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವ ಮೇ 8ರಂದು ಜರುಗಲಿದೆ. ಅಂದು ಬೆಳಗ್ಗೆ 9.30ಕ್ಕೆ ಲಕ್ಕವ್ವದೇವಿ ಪಲ್ಲಕ್ಕಿ ಉತ್ಸವ, ವಿಶೇಷ ಪೂಜೆ, ಪ್ರಸಾದ ಸೇವೆಗಳು ನಡೆಯುವವು. ರಾತ್ರಿ 8.30ಕ್ಕೆ ಮಟ್ಟಿಹಾಳದ ಮಾಯಮ್ಮದೇವಿ ಡೊಳ್ಳಿನ ಗಾಯನ ಸಂಘ ಮತ್ತು ಕೌಜಲಗಿಯ ವಿಠ್ಠಲ ಭೀರದೇವರ ಡೊಳ್ಳಿನ ಗಾಯನ ಸಂಘಗಳಿಂದ ಜಿದ್ದಾಜಿದ್ದಿಯ ಡೊಳ್ಳಿನ ಪದಗಳ ಪ್ರದರ್ಶನ ನಡೆಯಲಿದೆ.

ಯುವ ವಿಜ್ಞಾನಿ ಡಾ.ಪ್ರಶಾಂತ ಅಡರಕಟ್ಟಿಗೆ ಅಂತಾರಾಷ್ಟ್ರೀಯ ಗೌರವ

ಇಳಕಲ್ಲ: ಇಳಕಲ್ಲ ನಗರದ ವಿಜಯ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ವಿಜಯ ಮಹಾಂತೇಶ್ವರ ಮಹಾವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪ್ರಶಾಂತ ಅಡರಕಟ್ಟಿ ಅವರಿಗೆ ಅಂತಾರಾಷ್ಟ್ರೀಯ ಗೌರವ ಲಭಿಸಿದೆ.



ವಿಶ್ವದ ಟಾಪ್ 8 ಜನ ವಿಮರ್ಶಕರ (ಗ್ಲೋಬಲ್ ಫೀರ್ ರಿವ್ಯೋರ್) ಆಯ್ಕೆಯಲ್ಲಿ ಮೊದಲನೆ ಯವರಾಗಿ ಆಯ್ಕೆ

ವಿಶ್ವದ ಟಾಪ್ 8 ಜನ ವಿಮರ್ಶಕರ (ಗ್ಲೋಬಲ್ ಫೀರ್‌ರಿವ್ಯೋರ್) ಆಯ್ಕೆಯಲ್ಲಿ ಇವರು ಮೊದಲನೆಯವರಾಗಿ ಆಯ್ಕೆ ಆಗಿದ್ದಾರೆ. ಇಂಗ್ಲೆಂಡಿನ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯ ಪ್ರಮುಖ ಜರ್ನಲ್‌ಗಳಾದ ಆರ್. ಎಸ್.ಸಿ. ಅಡ್ವಾನ್ಸಸ್ ಮತ್ತು ನ್ಯೂ ಜರ್ನಲ್ ಆಫ್ ಕೆಮಿಸ್ಟ್ರಿಗಳಲ್ಲಿ ಪ್ರಕಟವಾಗುವ ಸಂಶೋಧನಾ ಪ್ರಬಂಧಗಳನ್ನು ಅತ್ಯಂತ ನಿಖರವಾಗಿ ಮತ್ತು ವೈಜ್ಞಾನಿಕವಾಗಿ ವಿಮರ್ಶಿಸಿದ ಇವರ ಸೇವೆ ಗುರುತಿಸಿ ಸಂಸ್ಥೆ ಅತ್ಯುತ್ತಮ ವಿಮರ್ಶಕ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಪಂಚದಾದ್ಯಂತ ಇರುವ ಲಕ್ಷಾಂತರ ಸಂಶೋಧಕರಲ್ಲಿ ಕೇವಲ ಶೇ.1ರಷ್ಟು ಜನರಿಗೆ ಮಾತ್ರ ಲಭಿಸುವ ವಿಶಿಷ್ಟ ಮನ್ನಣೆ ಗಳಿಸಿದ್ದಾರೆ. ಈ ಹಿಂದೆ ಅಂತಾರಾಷ್ಟ್ರೀಯ ಯುವ ವಿಜ್ಞಾನಿ ಪ್ರಶಸ್ತಿ (2021), ಕರ್ನಾಟಕ ಸಾಧಕ ರತ್ನ ಪ್ರಶಸ್ತಿ (2025) ಮತ್ತು ಕನಾಟಕ ಸಮಾಜ ಸೇವಾ ರತ್ನ ಪ್ರಶಸ್ತಿ (2026) ಇವರು ಭಾಜನರಾಗಿದ್ದಾರೆ. ಡಾ.ಪ್ರಶಾಂತ ಅಡರಕಟ್ಟಿ ಇವರು ಈಗಾಗಲೇ ಅಂತಾರಾಷ್ಟ್ರೀಯ ಮಟ್ಟದ 60ಕ್ಕೂ ಅಧಿಕ ಸಂಶೋಧನಾ ಪ್ರಬಂಧಗಳು ಹಾಗೂ 25 ಪುಸ್ತಕದ ಅಧ್ಯಾಯಗಳನ್ನು ಪ್ರಕಟಿಸಿದ್ದು, ವಿಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಈಗ ಲಭಿಸಿದ ಅಂತಾರಾಷ್ಟ್ರೀಯ ಪ್ರಶಸ್ತಿಯಿಂದ ಈ ನಾಡಿನ ಹಾಗೂ ಈ ಮಹಾವಿದ್ಯಾಲಯದ ಗೌರವ ಹೆಚ್ಚಾಗಿದೆ ಎಂದು ಅವರಿಗೆ ಅಭಿನಂದಿಸಿದ ಡಾ. ಗುರುಮಹಾಂತ ಶ್ರೀಗಳು, ಶಾಸಕ ವಿಜಯಾನಂದ ಕಾಶಪ್ಪನವರ, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ, ಸಮಾಜ ಸೇವಕ ಎಸ್.ಆರ್. ನವಲಿಹಿರೇಮಠ, ವಿಜಯ ಮಹಾಂತೇಶ್ವರ ವಿದ್ಯಾವರ್ಧಕ ಸಂಘ ಹಾಗೂ ನಗರದ ಅನೇಕ ಸಂಘ ಸಂಸ್ಥೆಯವರು ತಿಳಿಸಿದ್ದಾರೆ.

ಡೆಲಿವರಿ ಬಾಯ್ ಹತ್ಯೆ; ನಾಲ್ವರು ಹಂತಕರ ಸೆರೆ

ಬೆಂಗಳೂರಿನಲ್ಲಿ ಹತ್ಯೆಯಾದ ಚಿಮ್ಮಡದ ರಮೇಶ: ಮಗಳಿಗೆ ಕಿರುಕುಳ ಸಹಿಸದೇ ಹತ್ಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪೋಕ್ಸೋ ಪ್ರಕರಣ ದಾಖಲಿಸಿದರೂ ಬುದ್ಧಿ ಕಲಿಯದೆ ತಮ್ಮ ಮಗಳಿಗೆ ಕಾಡುತ್ತಿದ್ದ ಸಂಬಂಧಿಯನ್ನು ಕೊಂದು ರಾಜ ಕಾಲುವೆಗೆ ಎಸೆದಿದ್ದ ಬಾಲಕಿ ತಂದೆ ಹಾಗೂ ಚಿಕ್ಕಪ್ಪ ಸೇರಿ ನಾಲ್ವರನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕು ಚಿಮ್ಮಡ ಗ್ರಾಮದ ಈರಯ್ಯ ದುಂಡಯ್ಯ ಮಠಪತಿ, ಅವರ ಸೋದರ ಚೆನ್ನಯ್ಯ ಮಠಪತಿ ಹಾಗೂ ಸ್ನೇಹಿತರಾದ ಚೇತನ ಮಾದರ ಮತ್ತು ವಿನಾಯಕ ಗುರುವ ಬಂಧಿತರು. ಇತ್ತೀಚೆಗೆ ಯಲಹಂಕ ಬಳಿ ರಮೇಶ್‌ನನ್ನು (36) ಹತ್ಯೆಗೈದು ಆರೋಪಿಗಳು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

- ಮುಧೋಳ ತಾಲೂಕು ಚಿಮ್ಮಡ ಗ್ರಾಮದ ಈರಯ್ಯ ದುಂಡಯ್ಯ ಮಠಪತಿ, ಅವರ ಸೋದರ ಚೆನ್ನಯ್ಯ ಮಠಪತಿ ಹಾಗೂ ಸ್ನೇಹಿತರಾದ ಚೇತನ ಮಾದರ ಮತ್ತು ವಿನಾಯಕ ಗುರುವ ಬಂಧನ
- ವಾರಿಗೆಯಲ್ಲಿ ಈರಯ್ಯ ಅವರ ಮಗಳಿಗೆ ರಮೇಶ್ ಸಹೋದರನಾದರೂ ಈರಯ್ಯ ಅವರ ಅಪ್ರಾಪ್ತ ವಯಸ್ಸಿನ ಮಗಳ ಜತೆ ಅನುಚಿತ ವರ್ತನೆ ತೋರಿದ ಆರೋಪ ಮೇರೆಗೆ 2022ರಲ್ಲಿ ಮುಧೋಳ ಠಾಣೆಯಲ್ಲಿ ರಮೇಶ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲು
- ಕಾಟಕ್ಕೆ ಬೇಸತ್ತು ಮಗಳನ್ನು ಬೆಂಗಳೂರಿಗೆ ಕರೆದೊಯ್ದು ಶಿಕ್ಷಣ ಕೊಡಿಸುತ್ತಿದ್ದ ಈರಯ್ಯ
- 15 ದಿನಗಳ ಹಿಂದೆ ಬೆಂಗಳೂರಿಗೆ ಬಂದು ಅಲ್ಲಿಯೂ ಕಾಟ ಕೊಡಲಾರಂಭಿಸಿದ್ದ ರಮೇಶ
- ಈಚೆಗಷ್ಟೇ ಜಾಮೀನಿನ ಮೇಲೆ ಹೊರಬಂದಿದ್ದ ಕಾಮುಕ ರಮೇಶ
- ಮಾಹಿತಿ ತಿಳಿದು ಪ್ಲಾನ್ ಮಾಡಿ ಕರೆಸಿ ಮದ್ಯ ಕುಡಿಸಿ ಉಸಿರುಗಟ್ಟಿ ಹತ್ಯೆ ಮಾಡಿ ನಾಲೆಗೆ ಎಸೆದು ಪರಾರಿ

ಹಿಂಸೆ ಸಹಿಸಲಾರದೆ ಹತ್ಯೆ: ಈರಯ್ಯ ಹಾಗೂ ಮೃತ ರಮೇಶ್ ಸೋದರ ಸಂಬಂಧಿಗಳಾಗಿದ್ದರು. ವಾರಿಗೆಯಲ್ಲಿ ಈರಯ್ಯ ಅವರ ಮಗಳಿಗೆ ರಮೇಶ್ ಸಹೋದರನಾಗಬೇಕಿತ್ತು. ಅಪ್ರಾಪ್ತ ವಯಸ್ಸಿನ ಈರಯ್ಯ ಅವರ ಮಗಳ ಜತೆ ಅನುಚಿತ ವರ್ತನೆ ತೋರಿದ ಆರೋಪ ಮೇರೆಗೆ 2022ರಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ಠಾಣೆಯಲ್ಲಿ ರಮೇಶ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಬಂಧಿತನಾಗಿ ಜೈಲು ಸೇರಿದ್ದ ರಮೇಶ್ ಜಾಮೀನು ಪಡೆದು ಹೊರಬಂದು ಮತ್ತೆ ಈರಯ್ಯ ಕುಟುಂಬದವರಿಗೆ ಬೆದರಿಕೆ ಹಾಕುತ್ತಿದ್ದ. ಆಗ ಮತ್ತೆ ಆತನ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಈರಯ್ಯ ಕುಟುಂಬದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ವಿವರಿಸಿದ್ದಾರೆ.

ಈ ಬೆಳವಣಿಗೆ ಬಳಿಕ ಈರಯ್ಯ ಮಗಳನ್ನು ಬೆಂಗಳೂರಿಗೆ ಕರೆತಂದು ಶಿಕ್ಷಣ ಕೊಡಿಸುತ್ತಿದ್ದರು. 15 ದಿನಗಳ ಹಿಂದಷ್ಟೇ ಬೆಂಗಳೂರಿಗೆ ಕೆಲಸ ಅರಸಿ ಬಂದಿದ್ದ ರಮೇಶ್, ಯಲಹಂಕ ಸಮೀಪದ ಅರಳಾಸಂದ್ರದಲ್ಲಿ ನೆಲೆಸಿದ್ದ. ಸ್ವಿಗ್ಗಿ ಡೆಲಿವರಿ ಬಾಯ್ ಆಗಿ ದುಡಿದು ಜೀವನ ಸಾಗಿಸುತ್ತಿದ್ದ. ಸಂಬಂಧಿ ಮಗಳು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಬಿಕಾಂ ಓದುತ್ತಿರುವ ವಿಷಯ ಗೊತ್ತಾಗಿ ಮತ್ತೆ ತನ್ನ ಚಾಳಿ ಶುರು ಮಾಡಿದ್ದಾನೆ. ಸಂತ್ರಸ್ತೆಯ ಕಾಲೇಜು ಬಳಿ ಹೋಗಿ ಆಕೆಯ ಹಿಂಬಾಲಿಸುವುದಕ್ಕೆ ಆರಂಭಿಸಿದ. ತನಗೆ ಮತ್ತೆ ರಮೇಶ್ ಕಾಟ ಕೊಡುತ್ತಿರುವ ವಿಷಯವನ್ನು ತನ್ನ ತಂದೆ ಈರಯ್ಯ ಅವರಿಗೆ ಸಂತ್ರಸ್ತೆ ತಿಳಿಸಿದ್ದಳು ಎಂದು ಹೇಳಲಾಗಿದೆ.



ತನ್ನ ಮಗಳ ಕಿರುಕುಳ ನೀಡುತ್ತಿರುವ ಸೋದರ ಸಂಬಂಧಿ ರಮೇಶ್ ಹತ್ಯೆಗೆ ಈರಯ್ಯ ನಿರ್ಧರಿಸಿದ್ದ. ಈ ಕೃತ್ಯಕ್ಕೆ ಅವರಿಗೆ ಸೋದರ ಚೆನ್ನಯ್ಯ ಹಾಗೂ ಸ್ನೇಹಿತರು ಸಾಥ್ ಕೊಟ್ಟಿದ್ದಾರೆ. ಮಾ.27 ರಂದು ರಮೇಶ್‌ನನ್ನು ಮಾತುಕತೆ ನೆಪದಲ್ಲಿ ಕರೆಸಿ ಮದ್ಯ ಕುಡಿಸಿದ ಬಳಿಕ ಉಸಿರುಗಟ್ಟಿಸಿ ಹತ್ಯೆ ಮಾಡಿ ಅರಳಾಸಂದ್ರ ಸಮೀಪ ರಾಜಕಾಲುವೆಗೆ ಬಿಸಾಡಿ ಆರೋಪಿಗಳು ಪರಾರಿಯಾಗಿದ್ದರು. ಮರುದಿನ ರಾಜ ಕಾಲುವೆಯಲ್ಲಿ ಮೃತದೇಹ ಪತ್ತೆಯಾಯಿತು. ಈ ಕೃತ್ಯದ ತನಿಖೆಗಿಳಿದ ಪೊಲೀಸರು, ಮೃತನ ಪೂರ್ವಾಪರ ಮಾಹಿತಿ ಕಲೆ ಹಾಕಿದಾಗ ಹಂತಕರ ಜಾಡು ಸಿಕ್ಕಿತು. ಈ ಸುಳಿವು ಆಧರಿಸಿ ಆರೋಪಿಗಳನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಸಾಪ ಸಮೀರವಾಡಿ ಬೀಳಗಿ, ದತ್ತಿ ಪ್ರಶಸ್ತಿ ಪ್ರಕಟ

ಬಾಗಲಕೋಟೆ: ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿರುವ ಸಮೀರವಾಡಿ ಬೀಳಗಿ ಹಾಗೂ ಇನ್ನಿತರ ದತ್ತಿ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ. ವಿಜಯಪುರ ಜಿಲ್ಲಾ 7ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಮೀರವಾಡಿ ದತ್ತಿ ಪ್ರಶಸ್ತಿಗೆ ರುದ್ರಮ್ಮ ಎಸ್. ಗಿಡ್ಡಪ್ಪಗೋಳ ಅವರ ನಗುವೆ ಸ್ವರ್ಗ ಕವನ ಸಂಕಲನ ಹಾಗೂ ಹುಸೇನ್ ಎಂ. ಪತ್ತೆಕಾನ ಅವರ ಹೆತ್ತವರು ಕವನ ಸಂಕಲನ ನಿಂಗಮ್ಮ ಬಾವಿಕಟ್ಟಿ ಅವರ ದೃಷ್ಟಿಕೋನ ಕಥಾ ಸಂಕಲನ ಎಚ್.ಎಸ್. ಗೌಡರ ಅವರ ಅಂತರಂಗದ ಅಲೆಗಳು ಕಥಾ ಸಂಕಲನ, ಶೀಲಾ ಎಸ್. ಗೌಡರ ಅವರ ಮಹಾಯಾನ ಕಾದಂಬರಿ, ರಜಾಕ್ ಪ್ರತಾಪ್ ಅವರ ಬಡವರ ಕಣ್ಣೀರಿಗೆ ಕೊನೆಯಿಲ್ಲವೇ ನಾಟಕ ಮುಂತಾದ ಕೃತಿಗಳು ಆಯ್ಕೆಯಾಗಿವೆ.

ಬಾಗಲಕೋಟೆ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀಳಗಿ ದತ್ತಿ ಪ್ರಶಸ್ತಿಗೆ ಶ್ರೀದೇವಿ ಸುವರ್ಣ ಖಂಡಿಯವರ ಭೃಂಗದ ಬೆನ್ನೇರಿ ಕವನ ಸಂಕಲನ ಜಯಶ್ರೀ ಭಂಡಾರಿ ಅವರ ಹೃದಯ ಹಣತೆ ಕವನ ಸಂಕಲನ ಡಾ.ಉಮೇಶ ತಿಮ್ಮಾಪುರ ಅವರ ಕಣ್ಗಲ್ಲ ಕ್ರಾಸ್ ಕಥಾ ಸಂಕಲನ ಡಾ.ಯಶವಂತ ಕೊಕ್ಕನವರ ದಣಿಯ ಹಿಂದಿನ ಧ್ವನಿ ನಾಟಕ ಡಾ ಪ್ರಕಾಶ ಜಿ. ಖಾಡೆ ಅವರ ಗ್ರಾಮ್ಯ ಜಾನಪದ ಕೃತಿ ಎಂ.ಎಸ್. ಬದಾಮಿ ಅವರ ಬದುಕು ಮತ್ತು ಬೆವರು ಪತ್ರಿಕಾ ಬರಹಗಳ ಸಂಕಲನ ಹಾಗೂ ರುದ್ರಗೌಡ ಪಾಟೀಲರ ಸಂಜಿಕಟ್ಟೆ ಪುರಾಣ ಪತ್ರಿಕಾ ಬರಹಗಳ ಸಂಕಲನಗಳು ಆಯ್ಕೆಯಾಗಿವೆ. ಬೀಳಗಿ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನ ದತ್ತಿ ಪ್ರಶಸ್ತಿ ಡಾ.ಎಚ್.ಡಿ. ಕೆಂಗಲಗುತ್ತಿ ಇವರ ನುಡಿ ದರ್ಶನ ಕೃತಿಗೆ ನೀಡಲಾಗಿದೆ.

ಪ್ರಮೋದ ಶಂಕರ ತೆಗ್ಗಿ ಸೌಜನ್ಯ ತೆಗ್ಗಿ ಇವರ ಮದುವೆಯ ಸವಿ ನೆನಪಿಗಾಗಿ ನೀಡುವ ಬಾಗಲಕೋಟೆ ಜಿಲ್ಲಾ ಕ್ರಿಯಾಶೀಲ ಲೇಖಕ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ಲೇಖಕರಾದ ಡಾ.ಆರ್. ನಾಗರಾಜು ಹಾಗೂ ಶ್ರೀ ಎಂ.ಡಿ. ಚಿತ್ತರಗಿ ಅವರು ಆಯ್ಕೆಯಾಗಿದ್ದಾರೆ ಎಂದು ಶೆಲ್ಲಿಕೇರಿ ತಿಳಿಸಿದ್ದಾರೆ.

ರಾಜ್ಯಕ್ಕೆ ಫಸ್ಟ್ ರ್‍ಯಾಂಕ್ ಪಡೆದ ಸೌಜನ್ಯಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಹುನಗುಂದ

ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಶಾಲೆಯ ಹಳೆಯ ವಿದ್ಯಾರ್ಥಿನಿ ಸೌಜನ್ಯ ಬಸವರಾಜ ಕಂದಕೂರ ನಮ್ಮ ಶಾಲೆಗೆ ಹಾಗೂ ನಮ್ಮೂರಿಗೆ ಕೀರ್ತಿ ತಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಮಾತಾ ಎಜ್ಯುಕೇಷನ್ ಮ್ಯಾನೇಜಿಂಗ್ ಟ್ರಸ್ಟಿನ ಬಸವರಾಜ ಎಸ್. ಕಡಪಟ್ಟಿ ಹೇಳಿದರು.

ನಗರದ ಎಸ್.ಎಸ್. ಕಡಪಟ್ಟಿ ಇಂಟರನ್ಯಾಶನಲ್ ಪಬ್ಲಿಕ್ ಸ್ಕೂಲ್ ನಲ್ಲಿ ಶುಕ್ರವಾರ ಹಮ್ಮಿಕೊಂಡ

ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೌಜನ್ಯ ಪೂರ್ವ ಪ್ರಾಥಮಿಕ ದಿಂದ 5ನೇ ತರಗತಿವರೆಗೆ ನಮ್ಮ ಶಾಲೆಯ ವಿದ್ಯಾರ್ಥಿನಿಯಾಗಿದ್ದಳು. ಈಗ 10ನೇ ತರಗತಿಯಲ್ಲಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಕೀರ್ತಿ ಹೆಚ್ಚಿಸಿದ್ದಾಳೆ. ಸೌಜನ್ಯಳ ಸತತ ಪ್ರಯತ್ನ ಶ್ರದ್ಧೆ, ಪರಿಶ್ರಮ, ಪಾಲಕರ ಹಾಗೂ ಶಿಕ್ಷಕರ ಮಾರ್ಗದರ್ಶನದಿಂದ ಈ ಯಶಸ್ಸು ಸಾಧ್ಯವಾಗಿದೆ ಎಂದು ಹೇಳಿದರು.



ಚೇರಮನ್ನರಾದ ಲತಾ ಬಸವರಾಜ ಕಡಪಟ್ಟಿ ಮಾತನಾಡಿ, ವಿದ್ಯಾರ್ಥಿನಿಯ ಈ ಸಾಧನೆ ಮುಂದಿನ ದಿನಗಳಲ್ಲಿ ಶಾಲೆಯ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿದೆ ಎಂದು ತಿಳಿಸಿದರು.

ಶಾಲೆಯ ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ, ಶಿಕ್ಷಕರು ಹಾಗೂ ವಿದ್ಯಾರ್ಥಿನಿಯ ಪೋಷಕರು ಉಪಸ್ಥಿತರಿದ್ದರು.

ಶಾಲಾ ಶಿಕ್ಷಕರ ಸಂಘ: ಕಾರ್ಯಕಾರಿ ಸಮಿತಿಗೆ ಆಯ್ಕೆ



ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾ ಘಟಕದ ಕಾರ್ಯಕಾರಿ ಸಮಿತಿಗೆ (2026-31 ರ ಅವಧಿಗೆ) ಶುಕ್ರವಾರ ನಡೆದ ಚುನಾವಣೆಯಲ್ಲಿ 7 ಜನ ಸದಸ್ಯರು ಆಯ್ಕೆಯಾಗಿದ್ದಾರೆ.

ಗುಳೇದಗುಡ್ಡ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಕಾರ್ಯಕಾರಿ ಸಮಿತಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ 7 ಜನ ಸದಸ್ಯರು ಆಯ್ಕೆಯಾಗಿದ್ದಾರೆ. ಸಾಮಾನ್ಯ ಸದಸ್ಯರಾಗಿ ಎಸ್.ವಿ. ಯಲಿಗಾರ, ವೆಂಕಟೇಶ ಹೂನೂರ, ಧರ್ಮಣ್ಣ ನಿಲೂಗಲ್, ಕೆ.ಎಂ. ಮಾಗುಂಡಪ್ಪನ್ನವರ, ಎ.ಎಸ್. ಕಾಡರ, ಮಹಿಳಾ ಸದಸ್ಯೆಯರಾಗಿ ಅನ್ನಪೂರ್ಣ ಜವಳಿ, ಭವ್ಯ ಸಿ.ಎನ್. ಚುನಾಯಿತರಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿ.ಎ.ಲೆಂಕೆನ್ನವರ ತಿಳಿಸಿದ್ದಾರೆ

ಡಾ.ರಾಜಕುಮಾರ ಕನ್ನಡ ಅಸ್ಮಿತೆ

ಡಾ.ರಾಜಕುಮಾರ ಚಲನಚಿತ್ರಗಳ ಸಾಹಿತ್ಯಾನುಸಂಧಾನದಲ್ಲಿ ಬಾಳಾಸಾಹೇಬ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಕನ್ನಡಿಗರ ಬದುಕಿನ ಹಾಗೂ ಸಾಮಾಜಿಕ ಮೌಲ್ಯಗಳನ್ನು ಚಲನಚಿತ್ರಗಳ ಮೂಲಕ ಗಟ್ಟಿಗೊಳಿಸಿ ಕನ್ನಡ ಸಾಂಸ್ಕೃತಿಕ ಲೋಕದ ಪರಂಪರೆಯನ್ನು ಶ್ರೀಮಂತಗೊಳಿಸಿದ ಮೇರುನಟ ಡಾ.ರಾಜಕುಮಾರ ಕನ್ನಡ ಅಸ್ಮಿತೆಯಾಗಿದ್ದರು ಎಂದು ಕಾದಂಬರಿಕಾರ ಡಾ. ಬಾಳಾಸಾಹೇಬ ಲೋಕಾಪುರ ಹೇಳಿದರು



ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಭಾಭವನದಲ್ಲಿ ಶನಿವಾರ ನವದೆಹಲಿ ಸಾಹಿತ್ಯ ಅಕಾಡೆಮಿ ಹಾಗೂ ಧಾರವಾಡದ ಧಾರವಾಡ ಕಟ್ಟೆ, ಕಲಾ ಮಹಾವಿದ್ಯಾಲಯ ಕನ್ನಡ ಸ್ನಾತಕೋತ್ತರ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಡಾ. ರಾಜಕುಮಾರ ಚಲನಚಿತ್ರಗಳು: ಸಾಹಿತ್ಯಾನುಸಂಧಾನ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ ಚಲನಚಿತ್ರಗಳು ಮತ್ತು ಐತಿಹಾಸಿಕತೆ ಕುರಿತು ಮಾತನಾಡಿದ ಅವರು, ಐತಿಹಾಸಿಕ, ಪೌರಾಣಿಕ ಕಥೆ, ಭಕ್ತಿ, ಪುರಾಣ ಅಂದಿನ ಕಾಲದ ಉಡುಗೆ- ತೊಡುಗೆ ಎಲ್ಲವೂ ಅವರ ಸಿನಿಮಾದಲ್ಲಿ ಜನರಿಗೆ ಒಂದು ಮೌಲ್ಯಯುತವಾಗಿ ತಿಳಿಸುವ ಕೆಲಸ ಮಾಡಿವೆ. ಸ್ಪಷ್ಟವಾದ ಮಾತುಗಾರಿಕೆ, ದೇವರ ವರ ಡಾ. ರಾಜಕುಮಾರ ಅವರಿಗೆ ಇತ್ತು. ಇವರು ಐತಿಹಾಸಿಕ ಸಿನಿಮಾದಲ್ಲಿ ಹೇಳುವಂತಹ ಸಂಭಾಷಣೆಯನ್ನು ನೋಡಬಹುದು. ರಾಜನಾಗಿ, ರಾಕ್ಷಸ, ದರೋಡೆಕೋರ, ಕಳ್ಳ, ಖಳನಾಯಕ, ಭಕ್ತ, ಬಡವ, ಹುಚ್ಚನಾಗಿ ಕೊನೆಗೆ ದೇವರಾಗಿ ನಟಿಸಿದ ಏಕೈಕ ವ್ಯಕ್ತಿಯಾಗಿದ್ದಾರೆ ಎಂದು ಬಣ್ಣಿಸಿದರು.

ಇತಿಹಾಸ ಓದುವುಕ್ಕಿಂತ ರಾಜಕುಮಾರ ಅವರು ನಟಿಸಿದ ರಾಘವಾಂಕ, ಕಂಠೀರವ, ವೀರಕೇಸರಿ, ಇಮ್ಮಡಿ ಪುಲಿಕೇಶಿ, ಸರ್ವಜ್ಞಮೂರ್ತಿ, ಕೃಷ್ಣದೇವರಾಯ ಮುಂತಾದ ಚಿತ್ರಗಳಲ್ಲಿ ಅವರ ಸಹಜ ನಟನೆಯಿಂದ ಇತಿಹಾಸ ತಿಳಿಸಿದ ದೊಡ್ಡ ನಟನಾಗಿ ಕನ್ನಡದ ಅಸ್ಮಿತೆಯನ್ನು ಜನರ ಮನಸ್ಸಿನಲ್ಲಿ ರೂಪುಗೊಳ್ಳುವಂತೆ ಮತ್ತು ಬದುಕಿನ ಮೌಲ್ಯ ಕಟ್ಟಿಕೊಳ್ಳುವಂತೆ ಮಾಡಿವೆ. ಡಾ.ರಾಜಕುಮಾರ ಕನ್ನಡ ನಾಡಿನ ಅಸ್ಮಿತೆಯಾಗಿದ್ದಾರೆ ಎಂದರು.

ಶಶಿಧರ ನರೇಂದ್ರ, ಅವರು ಪೌರಾಣಿಕತೆಗಳ ಕುರಿತು ಮಾತನಾಡಿ, ಪೌರಾಣಿಕತೆಯ ಮೌಲ್ಯವನ್ನು ರಾಜಕುಮಾರ ಅವರು ತಮ್ಮಲ್ಲೇ ಆಹ್ವಾನಿಸಿಕೊಳ್ಳುತ್ತಿದ್ದರು. ಲೋಕದ ಕೇಡುಗಳ ಜೊತೆಗೆ ಹೋರಾಡುವಂತಹ ಸಿನಿಮಾಗಳನ್ನು ಸಮಾಜಕ್ಕೆ ನೀಡಿದ್ದಾರೆ ಎಂದರು.

ಸಾಹಿತ್ಯ ಪರಂಪರೆ ಕುರಿತು ಬಸವರಾಜ ಡೊಣೂರ ಮಾತನಾಡಿ, ಸಮಾಜವನ್ನು ಸುಧಾರಿಸುವಂತಹ ಮತ್ತು ಉತ್ಕೃಷ್ಟಗೊಳಿಸುವ ಶಕ್ತಿ ಡಾ.ರಾಜಕುಮಾರಗೆ ಇತ್ತು. ಕೃಷ್ಣ, ರಾಮ, ಪ್ರಹ್ಲಾದ್, ಹಿರಣ್ಯಕಶ್ಯಪ್ ಮತ್ತು ಮಹಿಷಾಸುರ ಮುಂತಾದ ಪಾತ್ರಗಳ ನಟನೆಯ ಮೂಲಕ ಜನರಲ್ಲಿ ಹೊಸ ಪ್ರಜ್ಞೆ, ಎಚ್ಚರಿಕೆ ಮೂಡಿಸುವುದರೊಂದಿಗೆ ಸಮಾಜದಲ್ಲಿ ಪರಿವರ್ತನೆಗೆ ಪರಿಣಾಮ ಬೀರಿದರು ಎಂದರು. ಭಕ್ತಿ ಸಾಹಿತ್ಯದ ಕುರಿತು ಶ್ರೀಹರಿ ಧೂಪದ ಮಾತನಾಡಿ, ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ರಾಜಕುಮಾರರ ಭಕ್ತಿ ಸಾಹಿತ್ಯ ಅಧ್ಯಯನ ಮಾಡದಿದ್ದರೆ ಅಪೂರ್ಣ ಎನಿಸುತ್ತದೆ. ಅವರು ಸಂಪೂರ್ಣ ಕವಿ, ಸಾಹಿತಿ ಅಲ್ಲದಿದ್ದರೂ ಅದಕ್ಕೆ ಸಮಾನವಾದ ಜ್ಞಾನ ಅವರಲ್ಲಿತ್ತು. ರಾಜಕುಮಾರರ ಭಕ್ತಿ ಗೀತೆಗಳು ಮತ್ತು ನಟನೆಗೆ ಅವರು ತುಂಬಿದ ಜೀವ ಕನ್ನಡ ಭಕ್ತಿ ಸಾಹಿತ್ಯ ಹಾಗೂ ಚಿತ್ರರಂಗವನ್ನು ಭಕ್ತಿಪ್ರದಾನ ಮಾಡಿದವು. ಭಕ್ತಿ ಗೀತೆಗಳು ಜನರ ಜೀವನಕ್ಕೆ ಮೌಲ್ಯಗಳನ್ನ ತರುವಂತಹ ಕಾರ್ಯ ಮಾಡುತ್ತವೆ ಎಂದರು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿಗಳಾದ ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್. ಮುಗನೂರಮಠ, ಐಕ್ಯೂಎಸಿ ಘಟಕದ ಸಂಯೋಜಕರಾದ ಎ.ಯು. ರಾಠೋಡ್, ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕ ವೀಣಾ ಕಲ್ಮಠ, ಬಸವರಾಜ ಕುಂಬಾರ, ಡಾ.ರಾಜಶೇಖರ ಹಳೆಮನೆ ಎಸ್ .ಡಿ. ಕೆಂಗಲಗುತ್ತಿ, ನಂದಿನ ಅಂಕದ ಸೇರಿದಂತೆ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಮಿಕರು ಕೂಡ ದೇಶದ ಬೆನ್ನೆಲುಬು

• **ಕನ್ನಡಪ್ರಭ ವಾರ್ತೆ** ಮಹಾಲಿಂಗಪುರ

ಕಾರ್ಮಿಕರು ದೇಶದ ಬೆನ್ನೆಲುಬು. ನಾವು ಇಂದು ಅನುಭವಿಸುತ್ತಿರುವ ಸೌಕರ್ಯಗಳು, ವಾಸಿಸುವ ಮನೆಗಳು, ಓಡಾಡುವ ರಸ್ತೆಗಳು ಮತ್ತು ಬಳಸುವ ಪ್ರತಿಯೊಂದು ವಸ್ತುಗಳ ಹಿಂದೆ ಒಬ್ಬ ಕಾರ್ಮಿಕನ ಬೆವರು, ಕಠಿಣ ಪರಿಶ್ರಮ ಮತ್ತು ತ್ಯಾಗ ಅಡಗಿದೆ. ಆದ ಕಾರಣ ವಿಶ್ವದೆಲ್ಲೆಡೆ ಕಾರ್ಮಿಕರ ಹಕ್ಕುಗಳನ್ನು ಎತ್ತಿಹಿಡಿಯಲು ಮತ್ತು ಅವರ ಸಾಧನೆಗಳನ್ನು ಗುರುತಿಸಿ ಗೌರವಿಸುವ ಈ ದಿನವೇ ಕಾರ್ಮಿಕರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ ಎಂದು ಕಾರ್ಮಿಕ ಮುಖಂಡ ಪೈಗಂಬರ್‌ಪೆಂಡಾರಿ ಹೇಳಿದರು.



ಪಟ್ಟಣದ ಎಪಿಎಂಸಿ ಭವನದಲ್ಲಿ ಶ್ರಮಿಕ ಮತ್ತು ಇತರೆ ಕಾರ್ಮಿಕ ಸಂಘಟನೆಗಳ ಸಹಯೋಗದಲ್ಲಿ ನಡೆದ ಕಾರ್ಮಿಕ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಾನವೀಯ ಆಧಾರದ ಮೇಲೆ ಕೆಲಸದ ಸಮಯ ನಿಗದಿ ಮತ್ತು ನ್ಯಾಯಯುತ ಪ್ರತಿಫಲ ಅಂದರೆ ವೇತನಕ್ಕಾಗಿ ಹೋರಾಟದ ಕಿಚ್ಚು ಹಚ್ಚುವ ಈ ದಿನ ಕಾರ್ಮಿಕರಿಗೆ ಮೀಸಲಾಗಿದೆ. ತಮ್ಮ ನೋವು ನಲಿವುಗಳ ಮಧ್ಯೆ ಗೋಳು ಹೋಯ್ದುಕೊಂಡು ಮತ್ತೊಬ್ಬರಿಗೆ ಸಹಕಾರ ನೀಡುವವರೇ ಕಾರ್ಮಿಕರು. ಪ್ರತಿಯೊಬ್ಬ ಕಾರ್ಮಿಕನಿಗೆ ಗೌರವಯುತ ಬದುಕು, ಕೆಲಸದಲ್ಲಿ ಸುರಕ್ಷತೆ ಮತ್ತು ನ್ಯಾಯಯುತ ವೇತನದ ಹಕ್ಕಾಗಿದೆ. ಎಲ್ಲ ಕಾರ್ಮಿಕರು ಸಂಘಟಿತರಾದಲ್ಲಿ ವಿಶ್ವವನ್ನೇ ಜಯಿಸುವ ಶಕ್ತಿ ಬರುತ್ತದೆ ಎಂದು ಹೇಳಿದರು.

ನೇಕಾರ ನಾಯಕ ಶಿವಲಿಂಗ ಟಿರಕಿ, ಲಕ್ಷ್ಮಣ ಕಿಶೋರಿ ಮಾತನಾಡಿದರು. ಈ ಸಂದರ್ಭದಲ್ಲಿ ಪೈಗಂಬರ್‌ಪೆಂಡಾರಿ, ಮಹೇಶ ಆರಿ, ಹಾಜಿ ರಫೀಕ್ ಜಂಗಿ,ನೂರ ಮರೆಗುದ್ದಿ, ಬೋಜು ಲಮಾಣಿ, ದಾದಾಪೀರ ಕಬಾಡಿ, ಪ್ರಕಾಶ ಚವಾನ, ಗನಸೈದ ಕಬಾಡಿ,ರಾಮು ಲಮಾಣಿ, ಅನ್ನು ಪೆಂಡಾರಿ, ಮೇಹಬೂಬ ಮುಲ್ಲಾ, ಯಾಕೂಬ್ ಜೀರಗಾಳ, ದಾವಲಸಾಬ ನಗಾರ್ಚಿ, ಅರಫಾತ ಮಾಲದಾರ, ಅಬುಬಕರ ಝಾರೆ, ಮಲಿಕ ಖುದಾವಂದ ಇದ್ದರು.

ಹೆಚ್ಚಿನ ಅಂಕದ ಜತೆ ಸಾಮಾನ್ಯ ಜ್ಞಾನ ಕೂಡ ಮುಖ್ಯವಾಗುತ್ತೆ

ಸಾಕಾ ಶಿಕ್ಷಣ ಸಂಸ್ಥೆಯ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಕೆ.ಎಸ್. ಗಾಣಗೇರ

• **ಕನ್ನಡಪ್ರಭ ವಾರ್ತೆ** ಇಳಕಲ್ಲ

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಪಠ್ಯಪುಸ್ತಕದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದರೆ ಸಾಲದು. ಅದರ ಜೊತೆಗೆ ಸಾಮಾನ್ಯ ಜ್ಞಾನವು ಕೂಡ ಇಂದು ಅತ್ಯವಶ್ಯಕವಾಗಿದೆ ಎಂದು ಇಳಕಲ್ಲ-ತೊಂಡಿಹಾಳದ ಮಾನಸಾ ಪಿಯು ವಿಜ್ಞಾನ ಮಹಾವಿದ್ಯಾಲಯ ಪ್ರಾಚಾರ್ಯ ಕೆ. ಎಸ್. ಗಾಣಗೇರ ಹೇಳಿದರು.

ನಗರದ ಶ್ರೀಮತಿ ವಿಮಲಾಬಾಯಿ ಸಾಕಾ ಶಿಕ್ಷಣ ಸಂಸ್ಥೆಯ ಶ್ರೀಮತಿ ವಿಮಲಾಬಾಯಿ ಸಾಕಾ ಬಿಬಿಎ ಹಾಗೂ ಬಿಸಿಎ ಮಹಾವಿದ್ಯಾಲಯದ ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ಸಂಸ್ಥೆಯ ಅಧ್ಯಕ್ಷರು ಹಣ ಗಳಿಸುವುದಕ್ಕಾಗಿ ಸಂಸ್ಥೆ ಆರಂಭಿಸಿಲ್ಲ. ಒಂದು ಸೇವಾ ಮನೋಭಾವದಿಂದ ಪ್ರಾರಂಭಿಸಿದ್ದಾರೆ ಎಂದರು.



ಪ್ರತಿಭಾನ್ವಿತ ಬಡ ಮಕ್ಕಳಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದರ ಜೊತೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಪಠ್ಯದ ಜೊತೆ ಅನೇಕ ಪಠ್ಯೇತರ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸುವಂತೆ ಮಾಡಿದ್ದಾರೆ ಎಂದು ಹೇಳಿದರು.

ಶ್ರೀಮತಿ ವಿಮಲಾಬಾಯಿ ಸಾಕಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸಾಕಾ, ಧರ್ಮದರ್ಶಿ ಶ್ರೀಮತಿ ಶ್ರೀಲಕ್ಷ್ಮಿ ಸಾಕಾ, ಕಾರ್ಯದರ್ಶಿ ಅಂಕಿತ ಸಾಕಾ, ಉಪಾಧ್ಯಕ್ಷ ಗಿರೀಶ ಸಾಕಾ, ಮಹಾವಿದ್ಯಾಲಯದ ಬಿಸಿಎ ವಿಭಾಗದ ಮುಖ್ಯಸ್ಥ ಗಿರೀಶ ಪದಕಿ, ಬಿಬಿಎ ವಿಭಾಗದ ಮುಖ್ಯಸ್ಥ ಪ್ರಶಾಂತಕುಮಾರ ಪಾಟೀಲ, ಬಿಸಿಎ ವಿದ್ಯಾರ್ಥಿ ಪ್ರತಿನಿಧಿ ವರ್ಷಾ ಧೋತ್ರೆ, ಬಿಬಿಎ ವಿಭಾಗದ ವಿದ್ಯಾರ್ಥಿ ಪ್ರತಿನಿಧಿ ವೇದಿಕಾ ದರಕ ಉಪಸ್ಥಿತರಿದ್ದರು.

ಬಿಸಿಎ ವಿಭಾಗದ ಮುಖ್ಯಸ್ಥ ಗಿರೀಶ ಪದಕಿ ಸ್ವಾಗತಿಸಿದರು. ಪ್ರಾಧ್ಯಾಪಕ ವಿನೋದ ಗಡೇದ ವಂದಿಸಿದರು. ಯಶಸ್ವಿನಿ ದೇವಾಂಗಮಠ ಹಾಗೂ ಸಂಗಡಿಗರು ನಿರೂಪಿಸಿದರು.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024
WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 **SRI.DALI MUNIYAPPA,** AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 **SMT.B.V. RATHNAMMA,** AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 **SRI.H.CHANDRAKEERTHI,** AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 **SMT.PARVATHAMMA,** AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 **SRI.NARASIMHA MURTHY,** S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 **SRI.NARASIMHA MURTHY,** SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 **V.HARISH KUMAR,** S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 **R.SHOBHA,** D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 **SAROJAMMA,** AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 **SRI. M. S MOHAN KUMAR,** ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 **SRI.K.S. SURENDRA BABU,** AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 **SRI.K.S VISHWAKIRAN,** AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 **SRI. R. V. SUDHIR,** S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 **RUDRA MURTHY** S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 **CHANDRAN** S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 **NARASAPPA** S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 **GANGARAJU** S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 **MUDDUHAHONNAIAH** S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 **CHANDRAPPA** S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-

"SPECIAL LEAVE PETITION (CIVIL) DIARY NO.
53577/2024
1.Delay condoned.
2. Issue notice.
3.Till the next date of hearing, the possession of the disputed property shall not be disturbed

WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-

"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 13th April, 2026

Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR

DIPR/CP/496/Zen/2026-27

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಕಾ.ನೀ.ನಿ.ನಿ ತುಮಕೂರು

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ; 01/2026–27 ದಿನಾಂಕ: 29.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ರೂ:–36.51 ಲಕ್ಷ ದಿಂದ 379.40 ಲಕ್ಷದವರೆಗಿನ 02 ಕೆಲಸ ಕಾಮಗಾರಿಗಳ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ KTPP ನಿಬಂಧನೆಗಳೊಂದಿಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 06.05.2026 ಸಂಜೆ 4.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 4.05.2026 ರಿಂದ 13.05.2026 ಸಂಜೆ 4.00 ಗಂಟೆ ವರೆಗೆ ತಾಂತ್ರಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:– 14.05.2026 ಸಂಜೆ 4.30ಗಂಟೆ ನಂತರ. ಆರ್ಥಿಕ ಬಿಡ್ ಇ–ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ:–16.05.2026 ಬೆಳಗ್ಗೆ 11.00 ಗಂಟೆ ನಂತರ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ).

ಇ.ಎಂ.ಡಿ ಮೊತ್ತ, ಕಾಲಾವಧಿ, ಕಾಮಗಾರಿಗಳ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/46/KSMCA/2026-27

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ) ರವರ ಕಛೇರಿ, ಅನೆಕ್ಸ್ ಕಟ್ಟಡ–2, ಜಿ.ಬಿ.ಎ ಕೇಂದ್ರ ಕಛೇರಿ, ಬೆಂಗಳೂರು–02.

ಸಂಖ್ಯೆ: GBA/2025-26/IND0001-Call-3/IND0002-Call-3/ IND0003-Call-2/IND0005-Call-2 ದಿನಾಂಕ: 04.05.2026

ಟೆಂಡರ್ ಅಧಿಸೂಚನೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಕಾಮಗಾರಿಗಾಗಿ ಅಲ್ಪಾವಧಿಯ ಮರು–ಟೆಂಡರ್ ಆಹ್ವಾನಿಸಲಾಗಿದ್ದು, ಜಿಬಿಎ ವ್ಯಾಪ್ತಿಯ ಐದು ಕಾರ್ಪೋರೇಷನ್‌ಗಳ ನಮ್ಮ ಕ್ಲಿನಿಕ್‌ಗಳಿಗೆ ಅಗತ್ಯವಿರುವ 243 ರೆಫ್ರಿಜಿರೇಟರ್‌ಗಳು (180–200 ಲೀಟರ್), 243 ಸೆಂಟ್ರಿಫ್ಯೂಜ್ ಯಂತ್ರಗಳು, ಲಸಿಕೆ ಸಂಗ್ರಹಣೆಗೆ ಕೋಲ್ಡ್ ಬಾಕ್ಸ್, ವ್ಯಾಕ್ಯುಟೈನರ್ ಮತ್ತು ಪಿಪೆಟ್ ಸೆಟ್‌ಗಳ ಪೂರೈಕೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:

1	ಟೆಂಡರ್ ಉಲ್ಲೇಖ ಸಂಖ್ಯೆ:	GBA/2025-26/IND0001-Call-3/ IND0002-Call-3/IND0003-Call-2/IND0005-Call-2
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ.	04.05.2026 ರಿಂದ
3	ಪೂರ್ವ–ಟೆಂಡರ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:	06.05.2026 ರಂದು ಬೆಳಗ್ಗೆ 11:30 ಗಂಟೆಗೆ ಸ್ಥಳ: ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನುಬಂಧ–3 ಕಟ್ಟಡ, ಎನ್.ಆರ್.ವೃತ್ತ, ಬೆಂಗಳೂರು–560002.
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	06.05.2026 ಸಂಜೆ 5:00 ಗಂಟೆಯೊಳಗೆ
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	14.05.2026 ಸಂಜೆ 5:00 ಗಂಟೆಯೊಳಗೆ
6	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ.	15.05.2026 ಸಂಜೆ 5:10 ಗಂಟೆಗೆ
7	ಮಾದರಿ ಪ್ರದರ್ಶನ ದಿನಾಂಕ ಮತ್ತು ಸಮಯ:	ತಾಂತ್ರಿಕ ಬಿಡ್ ತೆರೆಯುವಿಕೆಯ ನಂತರ ತಿಳಿಸಲಾಗುವುದು
8	ಸಂಪರ್ಕಕ್ಕಾಗಿ ವಿಳಾಸ	ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ), ಮುಖ್ಯ ಆರೋಗ್ಯಾಧಿಕಾರಿ ಕಛೇರಿ, ನೆಲ ಮಹಡಿ, ಅನೆಕ್ಸ್ ಕಟ್ಟಡ–2, ಎನ್.ಆರ್. ವೃತ್ತ, ಬೆಂಗಳೂರು–560002. ಇ–ಮೇಲ್: choph515@gmail.com. ದೂರವಾಣಿ: 9845208571

ಈ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತ ಸೇವಾ ಪೂರೈಕೆದಾರರು ಕೆಪಿಪಿ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–2:ಟೆಂಡರ್–06:2026–27 ದಿನಾಂಕ: 04.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:–ಲೆಕ್ಕ ಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ :–
(1) ಹೊಸದುರ್ಗ ತಾಲ್ಲೂಕಿನ ಕಲ್ಕೆರೆಯಿಂದ ಮಲ್ಲೇನಹಳ್ಳಿ ಕ್ರಾಸ್ ಮಾರ್ಗ ಬಲ್ಲಾಳಸಮುದ್ರ ಆಲಘಟ್ಟ ಮಲ್ಲೇನಹಳ್ಳಿ ಸಂಪರ್ಕಿಸುವ ರಸ್ತೆ ಮತ್ತು ಆಲಘಟ್ಟದಿಂದ ವಡ್ಡರಹಟ್ಟಿಗೆ ಕೂಡು ರಸ್ತೆಯ ಕಿ.ಮೀ 0.00 ರಿಂದ ಕಿ.ಮೀ 2.55 (ಕಡೂರು ತಾಲ್ಲೂಕು ಗಡಿ) ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ (ವ.ಇಂ. 34940)/4ನೇ ಕರೆ
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)120.00
ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 08–05–2026 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 11–05–2026 ಸಮಯ 16–00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 12–05–2026 ಸಮಯ 16–15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–05–2026 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು

DIPR/CTA/KSMCA/ 85/2026-27

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಸಾಧಕ ವಿದ್ಯಾರ್ಥಿನಿಗೆ ಸನ್ಮಾನ



• **ಕನ್ನಡಪ್ರಭ ವಾರ್ತೆ** ಬಾದಾಮಿ

ನಗರದ ಶ್ರೀ ಗುರುಕುಲ ವಿದ್ಯಾವರ್ಧಕ ಸಂಸ್ಥೆಯ ಪ್ರಜಂಟೇಷನ್ ಶಾಲೆಯಲ್ಲಿ ಕಲಿತು ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಚಿಕ್ಕಮುಚ್ಚಳಗುಡ್ಡ ಮೊರಾರ್ಜಿ ದೇಸಾಯ ವಸತಿ ಶಾಲೆಯಲ್ಲಿ ಓದಿ ಶೇ.97.44 ಅಂಕ ಪಡೆದು ಶಾಲೆಗೆ ಪ್ರಥಮ ಬಂದ ಪ್ರಿಯಾಂಕ ಪೂಜಾರಗೆ ಗುರುಕುಲ ಕೋಚಿಂಗ್ ಸೆಂಟರ್‌ನಲ್ಲಿ ಸನ್ಮಾನಿಸಲಾಯಿತು.

ಬಸವರಾಜ ಉಳಾಗಡ್ಡಿ, ಶಿಕ್ಷಕ ಹನುಮಂತ ಕಾಟನ್ನವರ, ಮುಖ್ಯಾಧ್ಯಾಪಕಿ ಸವಿತಾ ಮೇಟಿಮಠ, ಶಿಕ್ಷಕಿಯರಾದ ಶೈನಾಜ್ ಬಾರಾವಲಿ, ರೇಖಾ ಶೇಠ, ಶಂಕ್ರಮ್ಮ ಗಡ್ಡಿ, ಭವ್ಯಾ ಕಲಾಲ, ನಿವೇದಿತಾ ಬಸವರಾಜ ಉಳ್ಳಾಗಡ್ಡಿ, ಪರಿಚಾರಕಿ ನೇತ್ರಾ, ರೋಣದ ಇತರರು ಇದ್ದರು.

ಆಗ ತಂದೆ, ಈಗ ಮಗನ ವಿರುದ್ಧ ಸೋಲು

ಬಾಗಲಕೋಟೆ: 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಬಾಗಲಕೋಟೆ ಮತಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಹುಲ್ಲಪ್ಪ ಮೇಟಿ ಅವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದ ವೀರಣ್ಣ ಚರಂತಿಮಠ ಅವರು 5878 ಮತಗಳ ಅಂತರದಿಂದ ಸೋಲುಂಡಿದ್ದರು. ಆದರೆ, ಈಗ ಎಚ್.ವೈ. ಮೇಟಿ ಅವರು ಅಕಾಲಿಕ ಮರಣದಿಂದಾಗಿ ತೆರವಾಗಿದ್ದ ಬಾಗಲಕೋಟೆ ಉಪ ಚುನಾವಣೆಯಲ್ಲಿ ಮೇಟಿ ಅವರ ಪುತ್ರ ಉಮೇಶ ಮೇಟಿ ಅವರು ಸ್ಪರ್ಧೆ ಮಾಡಿದ್ದರು. ವಿಚಿತ್ರವೆಂದರೆ, ಈ ಬಾರಿಯೂ ಬಿಜೆಪಿಯಿಂದ ವೀರಣ್ಣ ಚರಂತಿಮಠ ಅವರೇ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿ, ಸೋಲುಂಡರು. ಆಗ ತಂದೆ ವಿರುದ್ಧ ಸೋತಿದ್ದ ವೀರಣ್ಣ ಚರಂತಿಮಠ ಅವರು, ಈಗ ಮೇಟಿ ಅವರ ಪುತ್ರ ಉಮೇಶ ಮೇಟಿ ವಿರುದ್ಧ 22,332 ಮತಗಳ ಅಂತರದಿಂದ ಸೋಲನುಭವಿಸಿದರು.



ಕರ್ನಾಟಕ ಸರ್ಕಾರ

ಅಬಕಾರಿ ಇಲಾಖೆ

ಅಬಕಾರಿ ಆಯುಕ್ತರ ಕಛೇರಿ, 2ನೇ ಮಹಡಿ, ಟಿ.ಟಿ.ಎಂ.ಸಿ. ಎ ಬ್ಲಾಕ್, ಬಿ.ಎಂ.ಟಿ.ಸಿ.ಕಟ್ಟಡ ಶಾಂತಿನಗರ, ಬೆಂಗಳೂರು–560027.

Tender No:- EXCISE/2026-27/SE0184
(https://kppp.karnataka.gov.in)

ಇ–ಟೆಂಡರ್ ಪ್ರಕಟಣೆ

ಅಬಕಾರಿ ಆಯುಕ್ತರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆದುರಾಗಿ **Non-Technical** ವಿಭಾಗದಲ್ಲಿ (ಬೆಳಚ್ಚುಗಾರರು(16), ವಾಹನ ಚಾಲಕರು(16), ಸ್ವಚ್ಛತಾ ಸಿಬ್ಬಂದಿ(6), ಮತ್ತು **Technical** ವಿಭಾಗದಲ್ಲಿ ಸಿಸ್ಟಮ್ ಅನಾಲಿಸ್ಟ್ (01) ಮತ್ತು ಜೂನಿಯರ್ ಪ್ರೋಗ್ರಾಮರ್ (02) ಸೇವೆಯನ್ನು 2026–27ನೇ ಸಾಲಿನ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾಗಿರುವ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದ್ದು, ಇಚ್ಛೆಯುಳ್ಳ ಅರ್ಹ ಸಂಸ್ಥೆಗಳು ಷರತ್ತು ನಿಬಂಧನೆಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದು. ಸದರಿ ಇ–ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿವೆ.

1) ಇ–ಟೆಂಡರ್ ಅಂದಾಜು ವಾರ್ಷಿಕ ಮೊತ್ತ **ರೂ. 88,25,272/–** (ಎಂಭತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರದ ಎರಡು ನೂರ ಎಪ್ಪತ್ತೆರಡು ಮಾತ್ರ), 2) ಇ.ಎಂ.ಡಿ ಮೊತ್ತ **ರೂ. 2,00,000/–** (ಎರಡು ಲಕ್ಷ ರೂಪಾಯಿಗಳು ಮಾತ್ರ). 3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **15.05.2026 ರಂದು ಸಂಜೆ 5.30** ಗಂಟೆವರೆಗೆ. 4) ಟೆಂಡರ್ ತೆರೆಯುವ ದಿನಾಂಕ ಮತ್ತು ಸ್ಥಳ: **16.05.2026 ರಂದು ಬೆಳಗ್ಗೆ 11.00 ಗಂಟೆಗೆ ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು,** ದೂರವಾಣಿ ಸಂಖ್ಯೆ: **080–22220302,** ಇ–ಮೇಲ್:**ecexcise@gmail.com.**

ಹೆಚ್ಚಿನ ಮಾಹಿತಿಯನ್ನು ಅಬಕಾರಿ ಆಯುಕ್ತರ ಕಛೇರಿಯ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: **080–22220302** ನ್ನು ಸಂಪರ್ಕಿಸಲು ಕೋರಿದೆ.

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/500/2026–27

ಸಹಿ/–
ಅಬಕಾರಿ ಆಯುಕ್ತರ ಪರವಾಗಿ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:36/2025–26/2ನೇ ಕರೆ ದಿನಾಂಕ: 30.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 5054–80–190–0–01–132–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿಯಲ್ಲಿ ಅನುಮೋದನೆಯಾಗಿರುವ ನಂಜನಗೂಡು ಉಪವಿಭಾಗ, ನಂಜನಗೂಡು ವ್ಯಾಪ್ತಿಯ "ನಂಜನಗೂಡು ತಾಲ್ಲೂಕು, ರಾಮನಾಥಪುರ–ತೆರಕಣಾಂಬಿ ರಾಜ್ಯ ಹೆದ್ದಾರಿ 86ರ ರಸ್ತೆಯ ಸರಪಳಿ 109.90 ರಲ್ಲಿ ಸೇತುವೆ ಮರು ನಿರ್ಮಾಣ ಕಾಮಗಾರಿ"ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ.4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/): ದಿ:30.04.2026 ರಿಂದ 08.05.2026ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಇ.ಎಂ.ಡಿ ಮೊತ್ತ ರೂ.4.76 ಲಕ್ಷಗಳಾಗಿರುತ್ತದೆ. ಮತ್ತು ಪೂರ್ವಭಾವಿ ಸಭೆಯನ್ನು ದಿ:04.05.2026ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

DIPR/DDMYS/132/KSMCA/111/2026-27

ನಿಧನ

ನೂರಅಹ್ಮದ್ ಬಾಬುಸಾಬ ಹುಬ್ಬಳ್ಳಿ



ಮುಧೋಳ: ನಗರದ ಮುಸ್ಲಿಂ ಸಮಾಜದ ಹಿರಿಯರು, ಕಲ್ಮೇಶ್ವರ ಸರ್ಕಲ್ ನಿವಾಸಿ, ಹಿರಿಯ ವಕೀಲ ನೂರಅಹ್ಮದ ಬಾಬುಸಾಬ ಹುಬ್ಬಳ್ಳಿ (63) ಭಾನುವಾರ ಬೆಳಗ್ಗೆ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಪುತ್ರರು ಹಾಗೂ ಅಪಾರ ಬಂಧು ಬಳಗ ಇದೆ. ನಗರದ ಅರ್ಬನ್ ಬ್ಯಾಂಕ್ ಮಾಜಿ ಅಧ್ಯಕ್ಷ ಸೈದುಸಾಬ ಹುಬ್ಬಳ್ಳಿ ಮೃತರ ಸಹೋದರರಲ್ಲಿ ಒಬ್ಬರು.

ಸಂತಾಪ: ವಕೀಲ ನೂರ ಅಹ್ಮದ ಹುಬ್ಬಳ್ಳಿ ರವರ ನಿಧನಕ್ಕೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಮುರುಗೇಶ ನಿರಾಣಿ, ವಕೀಲರ ಸಂಘದ ಪದಾಧಿಕಾರಿಗಳು, ಸದಸ್ಯರು ಮತ್ತು ಅಂಜುಮನ್ ಸಂಸ್ಥೆಯ ಆಡಳಿತ ಮಂಡಳಿ ಸೇರಿದಂತೆ ಹಿಂದು ಮತ್ತು ಮುಸ್ಲಿಂ ಸಮಾಜದವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅರ್ಜಿ ಆಹ್ವಾನ

ಬಾಗಲಕೋಟೆ: ಕೇಂದ್ರ ಸರ್ಕಾರದ ಡಿಎಎಚ್‌ಡಿ ಇಲಾಖೆಯ ಪಶುಪಾಲಕರಿಗೆ ಕೈಗೆಟಕುವ ದರದಲ್ಲಿ ಉತ್ತಮ ಔಷಧಿ ಒದಗಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಒಟ್ಟು 266 ಪಶು ಔಷಧಿ ವಿಕ್ರಮ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಮಾರ್ಗಸೂಚಿಯನ್ವಯ ಆಸಕ್ತಿ ಹೊಂದಿರುವ ಪಿಎಂ-ಕಿಸಾನ್ ಸಮೃದ್ಧಿ ಕೇಂದ್ರ, ಸ್ಥಳೀಯ ರೈತ ಸಂಪರ್ಕ ಕೇಂದ್ರಗಳು, ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಇತರೆ ಸಹಕಾರಿ ಸಂಘಗಳು ಪಶು ಔಷಧಿ ವಿಕ್ರಮ ಕೇಂದ್ರಗಳನ್ನು ಆರಂಭಿಸಲು ಸಹಕಾರ ಇಲಾಖೆಯ ಸಮನ್ವಯದೊಂದಿಗೆ, ಕೇಂದ್ರ ಸರ್ಕಾರದ ಡಿಎಎಚ್ಡಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ಔದ್ಯಮಿಕ ನ್ಯಾಯಾಧೀಕರಣ, ನ್ಯಾಯ ದೇಗುಲ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು–560 027

ಸೂಚನೆ

ಕ್ರಮ ಸಂ.	ಅರ್ಜಿದಾರರು	ಪ್ರತಿವಾದಿ	ಅರ್ಜಿ ಕ್ರಮ ಸಂಖ್ಯೆ	ವಿಚಾರಣೆ ದಿನಾಂಕ
1	ವಿಭಾಗೀಯ ನಿಯಂತ್ರಣಾಧಿಕಾರಿ, ಈಶಾನ್ಯ ವಲಯ, ಬೆಂ.ಮ.ಸಾ.ಸಂಸ್ಥೆ.	ರವಣಪ್ಪ ಆರ್ ವಿ S/o ವೆಂಕಟರಾಮಪ್ಪ, ಜೇಕವಾಂಡ್ಲಪಲ್ಲಿ ಗ್ರಾಮ, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ–561 207	SLA No. 395/2025	12.05.2026

ಮೇಲೆ ಹೆಸರಿಸಿರುವ ಅರ್ಜಿದಾರರು ಮೇಲ್ಕಂಡ ಪ್ರತಿವಾದಿಯನ್ನು ಬೆಂ.ಮ.ಸಾ.ಸಂಸ್ಥೆಯ ಸೇವೆಯಿಂದ ವಜಾಗೊಳಿಸಲು ಕೈಗಾರಿಕಾ ವಿವಾದ ಕಾರ್ಮಿಕ ಕಾಯ್ದೆ ಪರಿಚ್ಛೇದ 33 (2) (ಬಿ) ರಡಿಯಲ್ಲಿ ಅನುಮೋದನೆ ಕೋರಿರುತ್ತಾರೆ. ಆದ್ದರಿಂದ ಮೇಲೆ ನಮೂದಿಸಿರುವ ವಿಚಾರಣಾ ದಿನಾಂಕದಂದು ಬೆಳಗ್ಗೆ 11:00 ಗಂಟೆಗೆ ಗೌರವಾನ್ವಿತ ಔದ್ಯಮಿಕ ನ್ಯಾಯಾಲಯ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು– 560 027, ಇಲ್ಲಿ ಹಾಜರಾಗಿ ಪ್ರತಿವಾದಿ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದು.

ಸಹಿ/– (ಶಿರಸ್ತೆದಾರರು), ಔದ್ಯಮಿಕ ನಾಯಾಧೀಕರಣ

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ

ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235858 / 8431235867
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org

IFAB/2025-26/PM/WORK_INDENT3/CALL-4 Date: 30.04.2026

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದ ಬಲವರ್ಧನೆ ಯೋಜನೆಯ ಡಬಲ್ ಡೀಪ್ ರ್ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್ ಇತ್ಯಾದಿಗಳನ್ನು ಒಳಗೊಂಡಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮತ್ತು ಹೂವಿನ ಶೇಖರಣಾ ಕೋಲ್ಡ್ ರೂಮ್‌ಗಳ ನಿರ್ಮಾಣ ಟೆಂಡರ್ ಪ್ರಕಟಣೆ

IFAB ಲಿಮಿಟೆಡ್ ನಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದಲ್ಲಿ **RIDF** ಅಡಿಯಲ್ಲಿ ಡಬಲ್ ಡೀಪ್ ರ್ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್, ಇತ್ಯಾದಿ ಸೇರಿದಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಹಾಗೂ ಹೂವಿನ ಸಂಗ್ರಹಣೆ ಕೋಲ್ಡ್ ರೂಮ್‌ಗಳ ನಿರ್ಮಾಣ **(IFAB/2025-26/PM /WORK_INDENT3/CALL-4)**ಕ್ಕಾಗಿ ದಿ: **30.04.2026** ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ವಿವರ ಮತ್ತು ದಾಖಲೆಗಳು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ದಿನಾಂಕ: **30.04.2026** ರಿಂದ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.05.2026 ರ ಸಂಜೆ 4.00 ಗಂಟೆ** ಆಗಿರುತ್ತದೆ.

ದಯವಿಟ್ಟು ಗಮನಿಸಿ, ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಟೆಂಡರ್ ದಾಖಲೆಯಲ್ಲಿ ಕೊನೆಯ ದಿನಾಂಕ ವ್ಯತ್ಯಾಸವಾಗಿ ಕೈತಪ್ಪಿನಿಂದ 23.04.2026 ಎಂದು ನಮೂದಿಸಲಾಗಿದೆ. ಅದನ್ನು **11.05.2026** ಎಂದು ಓದಿಕೊಳ್ಳಲು ವಿನಂತಿಸಲಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/480/ಶಿರಡಿ ಸಾಯಿ/2026–27